

# ಅಧ್ಯಾಯ ೯ ಧರ್ಮ ಹಾಗೂ ತತ್ವಜ್ಞಾನ







# ಅಧ್ಯಾಯ ೬



## ಧರ್ಮ ಹಾಗೂ ತತ್ವಜ್ಞಾನ

ಧರ್ಮವೆಂದರೆ ವಿಶ್ವಾಸಗಳ ವ್ಯವಸ್ಥೆ ಹಾಗೂ ವಿಶ್ವಾಸ ಎಂದರೆ ನಂಬಿಕೆ. ವಿವೇಚನೆಯನ್ನು ಆಧಾರವಾಗಿಸಿಕೊಂಡ ಜ್ಞಾನದ ವ್ಯವಸ್ಥೆಯೇ ತತ್ವಚಿಂತನೆ. ಧರ್ಮ ಹಾಗೂ ತತ್ವಜ್ಞಾನಗಳ ನಡುವಣ ವಿವೇಚನೆಯೇ ಸಂಸ್ಕೃತಿಯ ಪ್ರಾರಂಭಕ್ಕೆ ನಾಂದಿಯಾಗಲಿದ್ದು ಇದರ ಸ್ವರೂಪವು ಬೌದ್ಧಿಕವಾದುದ್ದಾಗಿದೆ.

ಭಾರತೀಯ ಚಿಂತನೆಯ ಅಧ್ಯಯನದಿಂದ ತಿಳಿದು ಬರುವುದೇನೆಂದರೆ, ದೇಶವು ಧರ್ಮ ಹಾಗೂ ತತ್ವಜ್ಞಾನಗಳ ನಡುವೆ ಯಾವುದೇ ರೀತಿಯ ದ್ವಂದ್ವವನ್ನು ಎದುರಿಸದಿರುವುದು. ಭಾರತೀಯ ನಾಗರಿಕತೆಯು ವೇದಗಳಿಂದ ಪ್ರಾರಂಭವಾಯಿತು; ವೇದಗಳು ತತ್ವಚಿಂತನೆಯ ಪರಿಪೂರ್ಣ ಸ್ವರೂಪಗಳಾಗಿದ್ದು, ಭಾಷೆಯ ಪರಿಪೂರ್ಣ ರೂಪದಲ್ಲಿ ಅಭಿವ್ಯಕ್ತಗೊಳ್ಳುವ ಮೂಲಕ ನಾಗರಿಕತೆಯ ಪ್ರತಿಯೊಂದು ಅಂಶಕ್ಕೂ ಸಮಪರ್ಕ ಉಲ್ಲೇಖವಾಗಿದೆ. ವೇದಗಳಿಗೆ ಅಪೌರುಷೇಯ ಭಾಷೆಯಿದೆಯೆಂದು ಹೇಳಲಾಗುತ್ತದೆ; ಹಾಗಾಗಿ ಅವು ಲೇಖಕನೋರ್ವನಲ್ಲಿ ಇರಬಹುದಾದ ಗುಣದೋಷಗಳಿಂದ ಮುಕ್ತವಾಗಿದೆ. ವೇದಗಳ ವಸ್ತುವಿಷಯವು ಬ್ರಹ್ಮನ್, ಎಲ್ಲಾ ಆಗುಹೋಗುಗಳ ಹಿಂದಿನ ವಾಸ್ತವವೇ ಬ್ರಹ್ಮನ್; ವೇದಗಳಿಲ್ಲದೆ, ಬ್ರಹ್ಮನ್ ಎಂಬ ಪರಿಕಲ್ಪನೆ ಮಾಡಿಕೊಳ್ಳುವುದು ಸಾಧ್ಯವಾಗದ ಮಾತು.

ಚಾರ್ವಾಕ, ಬೌದ್ಧ, ಜೈನ ಹಾಗೂ ಇತರರು ವೇದಗಳ ನ್ಯಾಯಸಮ್ಮತತೆಯನ್ನು ನಿರಾಕರಿಸಿದ ಕಾರಣ, ವೇದಗಳನ್ನು ಸಮರ್ಥಿಸುವ ಅವಶ್ಯಕತೆಯು ಒದಗಿ ಬಂತು.

ಹಾಗಾಗಿ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ ಹಾಗೂ ಪೂರ್ವ–ಮೀಮಾಂಸೆಗಳೆಂಬ ಚಿಂತನಾ ವ್ಯವಸ್ಥೆಗಳು ಉದ್ಭವವಾದವು. ಈ ಐದು ವ್ಯವಸ್ಥೆಗಳು ವೇದಗಳ ಅಸೀಮತೆಯನ್ನು ಸೂಕ್ತವಾಗಿ ಗ್ರಹಿಸದೆ ಇರುವುದನ್ನು ಗಮನಿಸಿ, ಬಾದರಾಯಣನು ಬ್ರಹ್ಮಸೂತ್ರಗಳನ್ನು ಬರೆದು, ಬೇರೆಲ್ಲ ಚಿಂತನಾ ಶೈಲಿಗಳ ಸೀಮಿತತೆಯನ್ನು ಸಾಬೀತುಪಡಿಸಿ ವೇದ ಹಾಗೂ ಸತ್ಯಗಳೆರಡೂ ಚಿರಂತನವಾಗಿ ಕಾರ್ಯಸಾಧಕವಾದುವೆಂದು ಸ್ಥಾಪಿಸಿದನು. ವೇದಾಂತವೆಂದು ಸಾಮಾನ್ಯವಾಗಿ ಕರೆಯಲ್ಪಡುವ ಆತನ ಚಿಂತನಾ ವ್ಯವಸ್ಥೆಯನ್ನು ಉತ್ತರ–ಮೀಮಾಂಸೆಂದು ಕರೆಯಲಾಗುತ್ತದೆ.

ಈ ಸಾಮಾನ್ಯ ಹಿನ್ನೆಲೆಯಲ್ಲಿ, ಕರ್ನಾಟಕವು ಧರ್ಮ ಹಾಗೂ ತತ್ವಜ್ಞಾನಕ್ಕೆ ನೀಡಿದ ಕೊಡುಗೆಯನ್ನು ಅಧ್ಯಯನ ಮಾಡಬಹುದು. ತತ್ವಜ್ಞಾನ ಹಾಗೂ ಧರ್ಮಗಳು ನೆರಳು–ಬೆಳಕುಗಳಿದ್ದಂತೆ. ನೀವು ತತ್ವಜ್ಞಾನವನ್ನು ತಡೆಹಿಡಿದರೆ ಧರ್ಮವಿರುತ್ತದೆ; ಧರ್ಮದ ಟೀಕೆ ಮಾಡಿದರೆ, ತತ್ವಜ್ಞಾನವು ಹೊರಬರುತ್ತದೆ. ಕಾಲಾಂತರದಿಂದ, ಧರ್ಮ ಹಾಗೂ ತತ್ವಜ್ಞಾನಗಳ ಮುಕ್ತವಾದ ಅಭಿವೃದ್ಧಿಯನ್ನು ಕಂಡ ರಾಜ್ಯ ಕರ್ನಾಟಕ. ಹಾಗಾಗಿ ಧರ್ಮ–ತತ್ವಜ್ಞಾನಗಳೆರಡಕ್ಕೂ ಕರ್ನಾಟಕದ ಜನರು ಅತ್ಯಂತ ಗಣನೀಯವಾದ ಕೊಡುಗೆಗಳನ್ನು ನೀಡಲು ಸಾಧ್ಯವಾಯಿತು. ದೇಶದಲ್ಲಿ ಬೌದ್ಧಮತದ ಪರಿಚಯವಾಗುವವರೆಗೂ ಕರ್ನಾಟಕದಲ್ಲಿ ದರ್ಶನ–ಪೂರ್ವ ಯುಗವು ವಿಜ್ರಂಭಿಸಿತು. ಕ್ರಿ.ಪೂ. ಮೂರನೆಯ ಶತಮಾನದಲ್ಲಿದ್ದ ಅಶೋಕನ ಆಡಳಿತಾವಧಿಯಲ್ಲಿ, ಬಹುಶಃ ಪಾಲಿ ಹಾಗೂ ಪ್ರಾಕೃತ ಭಾಷೆಗಳ ಮೂಲಕ, ದಕ್ಷಿಣ ಭಾರತಕ್ಕೆ ಬೌದ್ಧ ಚಿಂತನೆಗಳು ಪರಿಚಯವಾದವು; ಏಕೆಂದರೆ ಕನ್ನಡಕ್ಕೆ ತನ್ನದೇ ಆದ ಸಾಹಿತ್ಯವಿರದೆ ಅದು ಸಂಸ್ಕೃತ–ಮಿಶ್ರಿತ ಆಡುಭಾಷೆ ಮಾತ್ರವಾಗಿತ್ತು.

## ಬೌದ್ಧ ಹಾಗೂ ಜೈನ ಮತಗಳು

ಸುಮಾರು ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಮಹಿಷಮಂಡಲ (ಮೈಸೂರು) ಹಾಗೂ ಬನವಾಸಿಗಳಿಗೆ (ಉತ್ತರ ಕನ್ನಡ) ಅಶೋಕನು ತನ್ನ ಬೌದ್ಧ ಧರ್ಮಪ್ರಚಾರಕರನ್ನು ಕಳುಹಿಸಿದರೂ, ಕರ್ನಾಟಕದಲ್ಲಿ ಬೌದ್ಧಮತದ ಪ್ರಭಾವವು ಅಷ್ಟೊಂದು ತೀವ್ರವಾಗಿರಲಿಲ್ಲ. ಕರ್ನಾಟಕದ ಕೊಪ್ಪಳ, ಮಸ್ಕಿ, ಸಿದ್ದಾಪುರ ಮುಂತಾದೆಡೆ ದೊರಕಿರುವ ಅಶೋಕನ ಶಿಲಾಶಾಸನಗಳು, ಕರ್ನಾಟಕದಲ್ಲಿ ಬುದ್ಧನ ಸಂದೇಶವನ್ನು ಸಾರುವ ಆತನ ಯತ್ನಗಳಿಗೆ ಮತ್ತಷ್ಟು ಸಾಕ್ಷಿಗಳನ್ನು ನೀಡುತ್ತವೆ. ಕರ್ನಾಟಕದ ಪ್ರಾರಂಭಿಕ ಚರಿತ್ರೆಯಲ್ಲಿ ಬೀರಿರಬಹುದಾದ ಬೌದ್ಧ ಧರ್ಮದ ಯಾವುದೇ ಪ್ರಭಾವವು, ಅದನ್ನು ಪಂಥವಾಗಿ ಪರಿವರ್ತಿಸದೆ, ಎಲ್ಲ ಜೀವಿಗಳ ಪಾವಿತ್ರ್ಯತೆ ಹಾಗೂ ನಮ್ಮದಲ್ಲದ ನಂಬಿಕೆಗಳ ಕುರಿತಾಗಿ ಪೂಜ್ಯಭಾವವನ್ನು ತಾಳುವ ಚಿಂತನೆಯ ಸಾಮಾನ್ಯ ಹರಡುವಿಕೆಗೆ ಸೀಮಿತವಾದಂತೆ ತೋರುತ್ತದೆ. ಇತರ ವಿಷಯಗಳಲ್ಲದೆ, ಶಿಲಾ ಶಾಸನ ೧೨ರಲ್ಲಿ 'ಎಲ್ಲ ಧರ್ಮಗಳ ಅನುಯಾಯಿಗಳ ಆಧ್ಯಾತ್ಮಿಕ ಬಲದ ಹೆಚ್ಚಳ, ಸೂಕ್ತವಾದ ಸಂದರ್ಭಗಳು ಬಂದಂತೆಲ್ಲ ಇತರ ಧರ್ಮದ ಅನುಯಾಯಿಗಳನ್ನು ಸೂಕ್ತವಾಗಿ ಗೌರವಿಸಬೇಕು ಹಾಗೂ ಎಲ್ಲ ಧರ್ಮಗಳ ಅನುಯಾಯಿಗಳೂ ವಿವಿಧ ಧರ್ಮಗಳಲ್ಲಿ ನಿಷ್ಣಾತರಾಗಿದ್ದು ಭದ್ರವಾದ ಸದಾಚಾರದ ಸಿದ್ಧಾಂತವನ್ನು ಹೊಂದಿರಬೇಕು,' ಎಂದು ಹೇಳುತ್ತದೆ.



ಬುದ್ಧ ಪಾದ, ಸನ್ನಡಿ, ಗುಲಬರ್ಗಾ ಜಿಲ್ಲೆ



*ಜೈನ ತೀರ್ಥಂಕರ, ಗುಡಗೇರಿ, ಧಾರವಾಡ ಜಿಲ್ಲೆ,*

ಆವರೆಗೆ ಕರ್ನಾಟಕದ ದರ್ಶನ ಅವಧಿಯು ಬೌದ್ಧಮತದ ಪರಿಚಯದೊಂದಿಗೆ ಪ್ರಾರಂಭವಾಯಿತು. ಸುಮಾರು ಕ್ರಿ.ಪೂ. ಮೂರನೆಯ ಶತಮಾನದ ವೇಳೆಗೆ, ಬೌದ್ಧ ಭಿಕ್ಷುಗಳು ದಕ್ಷಿಣದಲ್ಲಿ, ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ ಬೌದ್ಧ ಮತದ ಪ್ರಚಾರವನ್ನು ಪ್ರಾರಂಭಿಸಿದರೂ ಅಷ್ಟಾಗಿ ಯಶಸ್ಸನ್ನು ಕಾಣಲಿಲ್ಲ. ಚರಿತ್ರಕಾರರ ಪ್ರಕಾರ ಬೌದ್ಧರು ತಮ್ಮ ಚಿಂತನೆಗಳನ್ನು ಪ್ರಾಕೃತ ಭಾಷೆಯಲ್ಲಿ ಬೋಧಿಸುತ್ತಿದ್ದುದು ಕಾರಣವೆಂದೂ, ಕರ್ನಾಟಕದಲ್ಲಿ ಆ ವೇಳೆಗಾಗಲೇ ಕನ್ನಡವು ಆಡು ಭಾಷೆಯಾಗಿತ್ತೆಂದೂ, ಕನ್ನಡಿಗರು ಅವರ ಬೋಧನೆಗಳನ್ನು ಅರಿತುಕೊಳ್ಳಲು ಸಾಧ್ಯವಾಗಲಿಲ್ಲವೆಂದೂ ಹೇಳುತ್ತಾರೆ.

ಬೌದ್ಧ ಮತದ ಭಾಷೆಯು ಪ್ರಾಕೃತವಾಗಿದ್ದು, ಬೌದ್ಧಮತದ ಅತಿ ಗಹನವಾದ ತತ್ವಚಿಂತನೆಯನ್ನು ಬೌದ್ಧ ಭಿಕ್ಷುಗಳು ಪ್ರಚಾರ ಮಾಡಿದರು. ಕನ್ನಡ ಭಾಷೆಯಲ್ಲಿ ಆ ವೇಳೆಗಾಗಲೇ ಬಹಳಷ್ಟು ಸಂಸ್ಕೃತವನ್ನು ಅಳವಡಿಸಿಕೊಳ್ಳಲಾಗಿದ್ದು ವೈದಿಕ ಸಂಸ್ಕೃತಿಯು ಅದರ ಸಮಗ್ರ ಭಾಗವಾಗಿತ್ತು. ಹಾಗಾಗಿ ಬೌದ್ಧ ಧರ್ಮವು ಕರ್ನಾಟಕದ ನೆಲದಲ್ಲಿ ದೃಢವಾಗಿ ಸ್ಥಾಪನೆಗೊಳ್ಳಲು ಸಾಧ್ಯವಾಗಲಿಲ್ಲ.

ಸುಮಾರು ಕ್ರಿ.ಶ. ಐದನೆಯ ಶತಮಾನದ ವೇಳೆಗೆ, ಜೈನ ಪ್ರಚಾರಕರು ಕರ್ನಾಟಕಕ್ಕೆ ಬಂದರು. ಆದರೆ ಜನರನ್ನು ಉದ್ದೇಶಿಸಲು ಅವರು ಬಳಸಿದ ಭಾಷೆಯು ಯಾವುದೆಂದು ತಿಳಿದಿಲ್ಲ. ಜೈನಧರ್ಮವು ಬೌದ್ಧ ಧರ್ಮದ ಶೂನ್ಯವಾದವನ್ನು ತ್ಯಜಿಸಿ, ತೀರ್ಥಂಕರರು ಪರಿಪೂರ್ಣ ಜೀವಿಗಳೆಂದು ಬೋಧಿಸಿ, ವರ್ಣಾಶ್ರಮ ಧರ್ಮವನ್ನೂ, ಹಿಂದೂ ಧರ್ಮದ ಸಾಮಾಜಿಕ ವ್ಯವಸ್ಥೆಯನ್ನೂ ಅಂಗೀಕರಿಸಿ,

ಕರ್ನಾಟಕದ ಜನತೆಯ ಮೇಲೆ ಪ್ರಭಾವ ಬೀರಿ ಜೈನಧರ್ಮಕ್ಕೆ ಅವಕಾಶ ಕಲ್ಪಿಸಿದರು. ತಮ್ಮನ್ನು ತಾವು ಅರಿತುಕೊಳ್ಳುವಂತೆ ಮಾಡಿಕೊಂಡರು. ಜೈನ ಧರ್ಮಕ್ಕೆ ಆಕರ್ಷಿತವಾದ ಮೊದಲಿಗರಲ್ಲಿ ವೈಶ್ಯರು ಹಾಗೂ ಶೂದ್ರರು ಇದ್ದು ಅವರು ಮತಾಂತರಗೊಂಡರು.

ಬ್ರಾಹ್ಮಣೀಯ ಹಿಂದುತ್ವದ ವಿರುದ್ಧದ ಪ್ರತಿಭಟನೆಯಾಗಿ ಮೇಲೆದ್ದ ವೇದಾಂತ ತತ್ವ, ಬೌದ್ಧಮತ, ಜೈನಮತ ಹಾಗೂ ಇತರ ವೇದೇತರ ಧರ್ಮಗಳ ನಡುವಣ ವ್ಯಾಪಕವಾದ ಭಿನ್ನಾಭಿಪ್ರಾಯವನ್ನು ವೇದ ಹಾಗೂ ವೇದೇತರ ಸಂಪ್ರದಾಯಗಳ ನಡುವಣ ವ್ಯತ್ಯಾಸವು ವಿವರಿಸುತ್ತದೆ. ವೇದಾಂತದ ಪ್ರಕಾರ, ಕೇವಲ ವೇದಾಂತ ಅಭಿವ್ಯಕ್ತತೆಯಿಂದ ಮಾತ್ರ ಸಮಗ್ರ ಹಾಗೂ ಪರಿಪೂರ್ಣ ಸತ್ಯವನ್ನು ಪ್ರಸ್ತುತಪಡಿಸಲು ಸಾಧ್ಯ. ಆದರೆ, ಪುರಾತನ ಕಾಲದಲ್ಲಿ, ಬ್ರಾಹ್ಮಣರು ವೇದದ ತತ್ವಚಿಂತನೆಗಳನ್ನು ವೇದೇತರ ಭಾಷೆಯಲ್ಲಿ ಪ್ರಸ್ತುತಪಡಿಸುವ ಗೋಜಿಗೇ ಹೋಗಲಿಲ್ಲ.

ಜೈನ ಪ್ರಚಾರಕರು ಕರ್ನಾಟಕದಲ್ಲಿ ಸಕ್ರಿಯವಾಗಿದ್ದ ಕಾಲದಲ್ಲಿ, ವೇದಾಂತ ತತ್ವದ ಅನುಯಾಯಿಗಳ ನಡುವೆ ಒಂದು ರೀತಿಯ ಅವನತಿಯು ನುಸುಳಿದಂತೆ ತೋರುತ್ತಿದ್ದು, ಶೈವರು, ವೈಷ್ಣವರು ಹಾಗೂ ಇತರ ಪಂಥಗಳಾಗಿ ವಿಭಜಿತರಾದರು. ಜೈನಕೃತಿಗಳನ್ನು ಪಾಲಿ, ಅರ್ಧ-ಮಗಧಿ ಹಾಗೂ ಇತರ ಭಾಷೆಗಳಲ್ಲಿ ಬರೆಯಲಾಗಿದ್ದು ಅವರ ಚಿಂತನೆಗಳು ಭಾಷೆಗೆ ತೊಡಕಾಗಿರಲಿಲ್ಲ. ಯಾವುದೇ ಭಾಷೆ ಹಾಗೂ ಯಾವುದೇ ರೂಪದಲ್ಲಿ ಜೈನ ಧರ್ಮದ ಅಭಿವ್ಯಕ್ತತೆಯು ಸಾಧ್ಯವಾದುದರಿಂದ, ಜೈನರು ಅದರ ಪರಿಪೂರ್ಣ ಲಾಭವನ್ನು ಪಡೆದು, ಕನ್ನಡ ಭಾಷೆಯ ಮೇಲೆ ಪಾಂಡಿತ್ಯ ಸಾಧಿಸಿ, ತೀರ್ಥಂಕರರು ಹಾಗೂ ಜೈನಧರ್ಮದ ಕೃತಿಗಳನ್ನು ಬರೆದಿದ್ದು, ಇದಕ್ಕಾಗಿ ಕರ್ನಾಟಕದ ಅರಸರ ಆಶ್ರಯವನ್ನು ಪಡೆದರು. ಸ್ವತಃ ಕೆಲವು ಅರಸರೇ ಮತಾಂತರಗೊಂಡರು. ಕೆಲವು ಬ್ರಾಹ್ಮಣರೂ ಜೈನರಾದರು. ಜೈನ ಲೇಖಕರು ಬಹಳ ಸಕ್ರಿಯವಾಗಿದ್ದರಿಂದ, ಕೃತಿಗಳ ನಂತರ ಕೃತಿಗಳು ಹಾಗೂ ವಿದ್ವಾಂಸರ ನಂತರ ವಿದ್ವಾಂಸರು ಬಂದರು. ಇತಿಹಾಸ ಹಾಗೂ ಪುರಾಣಗಳ ಪುನರ್‌ರಚನೆ ಮಾಡಿ, ತಮ್ಮ ಧಾರ್ಮಿಕ ಉದ್ದೇಶಗಳಿಗೆ ಅನುಗುಣವಾಗಿ ಅದರಲ್ಲಿ ಬದಲಾವಣೆಗಳನ್ನು ತಂದರು. ಅವರ ಧರ್ಮವನ್ನು ಜನಪ್ರಿಯಗೊಳಿಸಲು ಇತರ ಸಿದ್ಧಾಂತಗಳಿಗಿಂತ ಹೆಚ್ಚು ಆಕರ್ಷಕವಾಗಿ ಮಾಡಲು, ಅದನ್ನು ಆಸ್ತಿಕವಾದವಾಗಿಯೂ ಮಾಡಿದರು.

ಬ್ರಹ್ಮಶಿವನ 'ಸಮಯಪರೀಕ್ಷೆ'ಯಲ್ಲಿ ಚಿತ್ರಿಸಿರುವಂತೆ, ಅವರ ಕೆಲವು ಕೃತಿಗಳು ಜೈನ ತಂತ್ರಗಳಿಗೆ ಸೀಮಿತವಾಗಿದ್ದವು. ಕುಂದಕುಂದಾಚಾರ್ಯರು ದ್ವಾದಶಮುಖ-ಪ್ರವಚನಾಸಾರ ಹಾಗೂ ಸಮಯಸಾರದ ಲೇಖಕರು; ಸ್ಯಾದ್ವಾದದ ಸಿದ್ಧಾಂತವನ್ನು ಸಮಂತಭದ್ರ, ಸಿಂಹನಂದಿ, ಸುಮತೀದೇವ, ಕುಮಾರಸೇನ, ಪೂಜ್ಯಪಾದ ಹಾಗೂ ಇತರ ಯತಿಗಳು ರಚಿಸಿದರು. ಅಕಳಂಕನು ಕರ್ನಾಟಕ ಹಾಗೂ ತೊಂಡೈಮಂಡಲಂನ ಜೈನ ಸಂಘಗಳನ್ನು ಸ್ಥಾಪಿಸಿದನು; ವಜ್ರಮಂಡಿಯು ಮಧುರೈಯಲ್ಲಿ ದ್ರಾವಿಡ-ಸಂಘವನ್ನು ಸ್ಥಾಪಿಸಿದನು. ಗಂಗ, ಚೋಳ, ಹಾಗೂ ರಾಷ್ಟ್ರಕೂಟ ರಾಜ್ಯಗಳಲ್ಲಿ ಮೂಲ ಸಂಘದ ಶಾಖೆಗಳನ್ನು ಸ್ಥಾಪಿಸಲು ಮುಂದಾದ ಇತರ ಮಹಾನ್ ವ್ಯಕ್ತಿಗಳೆಂದರೆ ಪುಷ್ಪಾನಂದಿ, ತೋರಣಾಚಾರ್ಯ, ಶ್ರೀಪಾಲದೇವ ಹಾಗೂ ಜಿನಸೇನಾಚಾರ್ಯರು.


## ವೇದಾಂತ

ಬಾದರಾಯಣನ ಬ್ರಹ್ಮಸೂತ್ರಗಳ ಪ್ರಕಾರ, ಕರ್ನಾಟಕದಲ್ಲಿ ಸಾಹಿತ್ಯಕ ಚಟುವಟಿಕೆಗಳು ಮುಂದುವರಿದರೂ, ವೇದ ಸಂಸ್ಕೃತಿಯ ಪರವಾದ ಬೃಹತ್ ಬದಲಾವಣೆಗಳು ಉಂಟಾದವು. ಸುಮಾರು ಕ್ರಿ.ಶ.ಒಂಬತ್ತನೆಯ ಶತಮಾನದ ವೇಳೆಗೆ, ವೇದಾಂತ ಚಿಂತಕರ ಪೈಕಿ ಅತ್ಯಂತ ಮಹಾನ್ ವ್ಯಕ್ತಿಯಾದ ಹಾಗೂ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದು, ಇತರ ಎಲ್ಲ ಚಿಂತನಾ ವ್ಯವಸ್ಥೆಗಳಲ್ಲಿನ ಲೋಪದೋಷಗಳನ್ನು ಎತ್ತಿಹಿಡಿದ ಶಂಕರಾಚಾರ್ಯರ ಕೇರಳದಲ್ಲಿ ಜನಿಸಿದರು. ಶಂಕರಾಚಾರ್ಯರು ದೇಶದೆಲ್ಲೆಡೆ ಸಂಚರಿಸಿ, ಅದ್ವೈತ ವೇದಾಂತವನ್ನು ಸ್ಥಾಪಿಸಿದರು. ಶಂಕರಾಚಾರ್ಯರು ಜ್ಞಾನ ಮಾರ್ಗವನ್ನು ಸ್ಥಾಪಿಸಿ, ಉಪನಿಷತ್ತುಗಳಿಗೆ ಅತ್ಯಂತ ಸಾಂಪ್ರದಾಯಿಕ ಹಾಗೂ ಸಾಧಾರವಾದ ಅರ್ಥಕಲ್ಪನೆಯನ್ನು ನೀಡಿದರು. ಮಾಯೆಯ ಸಿದ್ಧಾಂತದೊಂದಿಗೆ ಬೆಸೆದ ಆಧ್ಯಾತ್ಮಿಕ ಅದ್ವೈತವನ್ನು ಅವರು ಪ್ರತಿಪಾದಿಸಿದರು. ಅವರ ಪದ್ಧತಿಯ ಸ್ಫುಟವಾದ ಅಂಶವೆಂದರೆ ಪ್ರಸ್ಥಾನತ್ರಯ, ಉಪನಿಷತ್ತುಗಳು, ಭಗವದ್ಗೀತ ಹಾಗೂ ವೇದಾಂತ ಸೂತ್ರಗಳ ವ್ಯಾಖ್ಯಾನ; ಇದರ ಪ್ರಕಾರ, ಭೌತಿಕ ಪ್ರಪಂಚವು ಒಂದು ಮಾಯೆಯಾಗಿದ್ದು, ಅಜ್ಞಾನದಿಂದ ನಿಜವಾದ ಜ್ಞಾನದೆಡೆಗೆ ಸಾಗಿದಾಗ, ಮುಕ್ತಿಯನ್ನು ಪಡೆಯಬಹುದು.


ವಿದ್ಯಾಶಂಕರ ದೇವಾಲಯ,
ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ

ಈ ತತ್ವಜ್ಞಾನವನ್ನು ಮಾಯಾವಾದ ಅದ್ವೈತ, ಕೇವಲಾದ್ವೈತ ಅಥವಾ ಪರಿಪೂರ್ಣ ಅದ್ವೈತ ಎಂದು ಕರೆಯುತ್ತಾರೆ. ವಿವಿಧ ಭಕ್ತಿಗಳ ಪೈಕಿ, ಜ್ಞಾನದಂತೇ ಇರುವ ಅಥವಾ ಅದರ ಆಧಾರವನ್ನು ಹೊಂದಿದ, ಬ್ರಹ್ಮನ್‌ನೊಂದಿಗಿನ ಆತ್ಮದ ಅನನ್ಯತೆಯ ಜ್ಞಾನವು ಪರಮೋಚ್ಛವಾದುದು ಹಾಗೂ ಭಕ್ತಿಯ ಅತ್ಯುನ್ನತ ಸ್ವರೂಪ. ಶಂಕರರ ತತ್ವಚಿಂತನೆಯ ಉದಯದೊಂದಿಗೆ, ಭಾರತದಲ್ಲಿ ವೇದಗಳಿಗೆ ವ್ಯಕ್ತವಾದ ವಿರೋಧವು ಅಕ್ಷರಶಃ ಮಾಯವಾಗಿ, ವೇದ ಸಂಸ್ಕೃತಿಯು ದೃಢವಾಗಿ ಪುನರುಜ್ಜೀವನಗೊಂಡಿತು. ಅದ್ವೈತ ವೇದಾಂತದ ಮಹತ್ವವನ್ನು ಗುರುತಿಸಿ, ಕರ್ನಾಟಕದ ಅಂದಿನ ಅರಸರು, ಶಂಕರ ಸಿದ್ಧಾಂತದ ಪ್ರಚಾರಕ್ಕಾಗಿ ಸಂಪೂರ್ಣ ನೆರವನ್ನು ಒದಗಿಸಿ, ಶೃಂಗೇರಿಯಲ್ಲಿ ಮಠವೊಂದನ್ನು ಸ್ಥಾಪನೆ ಮಾಡಲು ಅನುವು ಮಾಡಿದರು. ಅವರ ಅನೇಕ ಅನುಯಾಯಿಗಳ ಪೈಕಿ ಒಬ್ಬರಾದ ವಿದ್ಯಾರಣ್ಯರು, ಕ್ರಿ.ಶ. ೧೪ನೆಯ ಶತಮಾನದಲ್ಲಿ ಅದ್ವೈತ ವೇದಾಂತದ ಸೂಕ್ಷ್ಮಾತಿಸೂಕ್ಷ್ಮ ಅಂಶಗಳ ಮೇಲೆ ಬೆಳಕು ಚೆಲ್ಲುವ ಸಂಸ್ಕೃತದ ಅನೇಕ ಪ್ರಮುಖ ಕೃತಿಗಳನ್ನು ರಚಿಸಿದರು. ಅವರು ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರು ಹಾಗೂ ಮಾರ್ಗದರ್ಶಕ ಸಂತರಾಗಿದ್ದರು. ತದನಂತರ, ಕನ್ನಡ ಮಾಧ್ಯಮದಲ್ಲಿ ಅದ್ವೈತದ ಅನೇಕ ವ್ಯಾಖ್ಯಾನಗಳು ಬಂದವು, ಅದರ ಪೈಕಿ ಮಹಾಲಿಂಗ ರಂಗ ಕವಿಯ ರಚನೆಯು ಅತ್ಯುತ್ತಮವಾದುದೆಂದು ಪರಿಗಣಿಸಲಾಗಿದೆ.

ಕರ್ನಾಟಕದ ಶೃಂಗೇರಿಯಲ್ಲಿ ಶಂಕರಾಚಾರ್ಯರು ತಮ್ಮ ಮುಖ್ಯ ಆಚಾರ್ಯರ ಪೀಠವನ್ನು ಸ್ಥಾಪಿಸಿದರು ಹಾಗೂ ಅಲ್ಲಿ ದೀರ್ಘಕಾಲದವರೆಗೂ ತಂಗಿ, ಅವರ ಅನುಯಾಯಿಗಳಿಗೆ ತಮ್ಮ ಅದ್ವೈತದ ತತ್ವಚಿಂತನೆಯನ್ನು ಬೋಧಿಸಿ, ಪರಮೋಚ್ಛ ವಾಸ್ತವವಾದ ಬ್ರಹ್ಮನ್‌ನೊಂದಿಗಿನ ಐಕ್ಯತೆಯನ್ನು ಒತ್ತಿ ಹೇಳಿದರು. ಮೋಕ್ಷವನ್ನು ಜ್ಞಾನದ ಮೂಲಕ ಪಡೆಯಬಹುದೆಂದು ಅವರು ಒತ್ತಿ ಹೇಳಿದರು. ಸತ್ವ ಶುದ್ಧಿ ಅಥವಾ ಹೃದಯವನ್ನು ನಿಷ್ಕಳಂಕತೆಯತ್ತ ಒಯ್ಯಲು, ದೇವರತ್ತ (ಈಶ್ವರ) ವೈಯಕ್ತಿಕವಾಗಿ ತೋರುವ ಶ್ರದ್ಧೆ ಪ್ರೇಮ ಹಾಗೂ ಕರ್ಮ ಮಾರ್ಗದ ಆಚರಣೆಯ ಕೇವಲ ಸಾಧನಗಳು; ಮಾತಿಗೆ ಸಿಲುಕದ ಅನುಭವವಾದ ಜೀವ ಹಾಗೂ ಬ್ರಹ್ಮನ್‌ಗಳ (ಅಹಂ ಬ್ರಹ್ಮಾಸ್ಮಿ) ಐಕ್ಯತೆ ಹಾಗೂ ಗುರುತಿನ ಸಾಕ್ಷಾತ್ಕಾರವನ್ನು ಪಡೆಯಲು, ಇದು ಅವಶ್ಯಕ ಪ್ರಾರಂಭಿಕ ಹೆಜ್ಜೆಯಾಗಿದೆ. ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಹಾಗೂ ಭಗವದ್ಗೀತದ ಅವರ ಭಾಷ್ಯಗಳೂ ಸೇರಿದಂತೆ, ಈ ಚಿಂತನೆಯನ್ನು ಅವರು ತಮ್ಮೆಲ್ಲ ಬರವಣಿಗೆಗಳಲ್ಲೂ ವಿವರವಾಗಿ ತಿಳಿಸಿದ್ದಾರೆ.



ರಾಮನುಜಾಚಾರ್ಯ

ಕ್ರಿ.ಶ. ೧೧ನೆಯ ಶತಮಾನದಲ್ಲಿ, ಮತ್ತೊಬ್ಬ ಮಹಾನ್ ವೇದಾಂತ ಚಿಂತಕರಾದ ರಾಮಾನುಜಾಚಾರ್ಯರ ಉದಯವನ್ನು ತಮಿಳುನಾಡು ಕಂಡಿತು; ಬೃಹದಾರಣ್ಯಕ ಉಪನಿಷತ್ತುಗಳ ಅಂತರ್ಯಾಮಿ ಬ್ರಹ್ಮನಲ್ಲಿನ ಮಹಾನ್ ಸತ್ಯವನ್ನು ಅವರು ಕಂಡರು. ವೇದಗಳ ಮಿಕ್ಕೆಲ್ಲ ಭಾಗಗಳನ್ನೂ ಅದಕ್ಕೆ ಸರಿಹೊಂದಿಸಿ, ಈ ಚಿಂತನೆಗಳಿಗೆ ಸಂಬಂಧಿಸಿದಂತೆ, ಬಾದರಾಯಣನ ಬ್ರಹ್ಮಸೂತ್ರಗಳನ್ನು ವ್ಯಾಖ್ಯಾನಿಸಿ, ತಮಿಳಿನ ನಾಲಾಯಿ–ಪ್ರಬಂಧಂ ನಲ್ಲಿ ನಿರೂಪಿಸಲಾದ ದ್ರಾವಿಡ ಸಂತರ ಅನುಭವಗಳನ್ನು ಬಳಸಿ, ತಮ್ಮ ಸ್ವಂತ ಸ್ಥಾನವನ್ನು ಭದ್ರಗೊಳಿಸಿಕೊಂಡರು. ಹಾಗಾಗಿ, ಅವರ ಸ್ಥಾನವನ್ನು ಉಭಯ–ವೇದಾಂತ ಎಂದು ಪರಿಗಣಿಸಲಾಗಿದೆ. ಬ್ರಹ್ಮನ್‌ಅನ್ನು ಅದ್ವೈತವಾಗಿ ಕಂಡ ಶಂಕರಾಚಾರ್ಯರ ಚಿಂತನೆಯಲ್ಲಿ, ಇವರು ವಿರೋಧೋಕ್ತಿಗಳನ್ನು ತೋರಿಸಿದರು.



ಶಂಕರಾಚಾರ್ಯ

ಆದರೆ ಹನ್ನೆರಡು ವರ್ಷಗಳ ಕಾಲ ಕರ್ನಾಟಕದಲ್ಲಿ ಬಾಳಿದ ರಾಮಾನುಜಾಚಾರ್ಯರು, ಶಂಕರರ ವಿಶಿಷ್ಟಾದ್ವೈತ ತತ್ವಚಿಂತನೆಯನ್ನೂ ಹಾಗೂ ದೇವರಿಗೆ ಗಾಢವಾದ ಪ್ರೇಮ ಹಾಗೂ ಪರಿಪೂರ್ಣ ಆತ್ಮಸಮರ್ಪಣೆಯ ಭಕ್ತಿ ಹಾಗೂ ಪ್ರಪತ್ತಿಯ ಧರ್ಮವನ್ನು ಬೋಧಿಸುತ್ತಾ ಕರ್ನಾಟಕದಲ್ಲಿ ಶ್ರೀವೈಷ್ಣವರ ಮುಖ್ಯ ಯಾತ್ರಾಸ್ಥಳವಾದ ಮೇಲುಕೋಟೆಯಲ್ಲೇ ಉಳಿದುಕೊಂಡರು. ಅವರ ತತ್ವಚಿಂತನೆ ಹಾಗೂ ಧರ್ಮದ ಸಾರವನ್ನು 'ದೇವರ ಬೌದ್ಧಿಕ ಪ್ರೇಮ' ಎಂದು ಬಣ್ಣಿಸಬಹುದು; ಅದನ್ನು ಅವರು ಭಕ್ತಿ ರೂಪದ ಜ್ಞಾನ ಎಂದು ವಿವರಿಸಿದ್ದಾರೆ. ಅಂದರೆ ದೇವರನ್ನು ಅರಿತುಕೊಂಡಿರುವುದು, ದೇವರತ್ತ ಇರುವ ಒಲವಾಗಿ ಮಾರ್ಪಾಡಾಗುವುದು. ಯಾವುದೇ ಸ್ವಾರ್ಥದ ಉದ್ದೇಶವಿಲ್ಲದೆ, ಕೇವಲ ದೇವರು ಹಾಗೂ ಮನುಕುಲದ ಸೇವೆಯ ಉದ್ದೇಶವನ್ನು ಹೊಂದಿದ ಕರ್ಮವನ್ನು ನಿಸ್ವಾರ್ಥವಾಗಿ ಆಚರಿಸುವುದನ್ನು ಪ್ರತಿಪಾದಿಸಿದರು. ಅದನ್ನು ಭಗವತ್ ಕೈಂಕರ್ಯ ಹಾಗೂ ಭಾಗವತ ಕೈಂಕರ್ಯ ಎಂದು ಕರೆದರು. ರಾಮಾನುಜಾಚಾರ್ಯರಿಗೆ ಸೇವೆ ಅಥವಾ ಕೈಂಕರ್ಯವೇ ಆದಿ–ಅಂತ್ಯಗಳೆರಡೂ ಆಗಿದ್ದವು. ಭಕ್ತಿ ಹಾಗೂ ಪ್ರಪತ್ತಿಗಳ ಅವರ ತತ್ವಚಿಂತನೆಯು, ಉಚ್ಛ ಅಥವಾ ನೀಚ, ಸಾಕ್ಷರಸ್ಥ ಅಥವಾ ಅನಕ್ಷರಸ್ಥ, ಅತ್ಯಂತ ದೀನರು, ವಿನೀತರು ಹಾಗೂ ದಿಕ್ಕು ಕಾಣದವರಿಗೂ ಮೋಕ್ಷದ ಬಾಗಿಲನ್ನು ತೆರೆಯಿತು. ಅವರು ತಮ್ಮ ಧರ್ಮಕ್ಕೆ ತಮಿಳುನಾಡಿನ ಆಳ್ವಾರ್‌ಗಳು, ವೈಷ್ಣವ ಸಂತರಿಂದ ಬಹಳಷ್ಟು ಪ್ರೇರಣೆಯನ್ನು ಪಡೆದುಕೊಂಡರು. ಬೇಲೂರು, ಮೇಲುಕೋಟೆ ಹಾಗೂ ಇತರ ಸ್ಥಳಗಳಲ್ಲಿ ವಿಷ್ಣುವರ್ಧನನು ನಿರ್ಮಿಸಿರುವ ದೇವಾಲಯಗಳು ಅವರ ಚಟುವಟಿಕೆಯ ತಾಣಗಳಾಗಿತ್ತು.

ದ್ವೈತ ವೇದಾಂತ ಚಿಂತನೆಯ ಪ್ರತಿಪಾದಕರಾದ ಮಧ್ವಾಚಾರ್ಯರೂ ಸಹ ಭಕ್ತಿ ಪಂಥದ ಸಮರ್ಥಕರಾಗಿದ್ದರು; ದೈವ ಹಾಗೂ ಮಾನವನ ನಡುವಣ ವ್ಯತ್ಯಾಸವನ್ನು ಒತ್ತಿ ಹೇಳಿದ ಅವರು, ವ್ಯಕ್ತಿಯು ತನ್ನ ಅಸ್ತಿತ್ವಕ್ಕಾಗಿ ಪರಮ ಪುರುಷನಾದ ದೇವರ ಕೃಪೆಯ ಮೇಲೆ ಅವಲಂಬಿತವಾಗಿದ್ದು,

ಆತನೊಂದಿಗೆ ಯಾವುದೇ ರೀತಿಯ ಸಮಾನತ್ವವನ್ನು ವ್ಯಕ್ತಿಯೊಬ್ಬನಿಂದ ಸ್ಥಾಪಿಸಲು ಸಾಧ್ಯವೇ ಇಲ್ಲವೆಂದು ಹೇಳಿದರು. ದೇವ, ಮಾನವ ಹಾಗೂ ಬ್ರಹ್ಮಾಂಡಗಳನ್ನು ಅರಿಯಬೇಕಾದರೆ, ವಸ್ತುಗಳ ನಡುವಣ ವ್ಯತ್ಯಾಸದ ಜ್ಞಾನವನ್ನು ಮೊದಲು ಅರಿಯಬೇಕಾದುದು ಅವಶ್ಯವೆಂದು ಅವರು ಒತ್ತಿ ಹೇಳಿದರು. ಆತ್ಮ ಹಾಗೂ ಜಗತ್ತಿನಲ್ಲಿ, ದೇವರ ಅಲೌಕಿಕ ಹಾಗೂ ವಿಶ್ವವ್ಯಾಪಿಯಾದ ಮಹಿಮೆಯನ್ನು ಸಮರ್ಥಿಸುವುದು ಅವರ ಮೂಲ ಉದ್ದೇಶವಾಗಿತ್ತು.

ಹುಟ್ಟಿನಿಂದ ಹಾಗೂ ದೈವೀಕ ಕಾರುಣ್ಯದಿಂದ ಸಾಮಾಜಿಕ ಸ್ಥಾನಮಾನಕ್ಕೆ ಒಳಹೊಕ್ಕಲಾಗದ ಜನರ ಜೀವನವನ್ನು ಬೌದ್ಧ ಮತದ ಶೂನ್ಯವಾದದಿಂದ ಮುಕ್ತಗೊಳಿಸುವ ಯತ್ನವನ್ನು ಶ್ರೀವೈಷ್ಣವ ತತ್ವಚಿಂತನೆಯು ಮಾಡಿತು. ರಾಮಾನುಜರ ಶ್ರೀವೈಷ್ಣವತ್ವವು ಏಕದೈವವಾದದ ಒಂದು ರೂಪವಾಗಿದ್ದು, ಹರಿಯಲ್ಲಿ ನಂಬಿಕೆ ಇರುವಂತಹುದಾಗಿದೆ; ಹರಿಯ ಎರಡು ಮಾನವ ಅವತಾರಗಳು ರಾಮ ಹಾಗೂ ಕೃಷ್ಣ. ಇದು ಜ್ಞಾನ ಹಾಗೂ ಕೃತಿಗಳ ಧರ್ಮವಾಗುವ ಬದಲು, ಅದು ಪ್ರೇಮ ಹಾಗೂ ಪ್ರಾರ್ಥನೆಗಳ ಧರ್ಮವಾಗಿದೆ. ಆಳ್ವಾರ್ ಸಂತರು ವೇದ ಹಾಗೂ ಉಪನಿಷತ್ತುಗಳ ತಾತ್ಪರ್ಯವನ್ನು ನೀಡಿ, ಅದನ್ನು ಸರಳ ಭಾಷೆಯಲ್ಲಿ ವ್ಯಕ್ತಪಡಿಸಿ, ಅದರಲ್ಲಿರುವ ಪ್ರೇರಿತ ಮಾತು ಹಾಗೂ ಉದಾತ್ತ ಬೋಧನೆಗಳನ್ನು ಹೊರಗೆಡವಿದರು. ಮೋಕ್ಷವು ಎಲ್ಲ ವರ್ಗಗಳಿಗೂ ತೆರೆದಿತ್ತು ಹಾಗಾಗಿ, ಸರಳ ಹಾಗೂ ಅಂಗೀಕೃತ ವಿಧಾನಗಳಿಲ್ಲದ ವ್ಯವಸ್ಥಿತ ಹಾಗೂ ಔಪಚಾರಿಕ ಪೂಜಾ ಪದ್ಧತಿಯು ಗಮನ ಸೆಳೆಯಿತು.



ಮಧ್ವಾಚಾರ್ಯ

ರಾಮಾನುಜಾಚಾರ್ಯರ ಬೋಧನೆಯ ನಿರ್ದಿಷ್ಟ ಅಂಶವೆಂದರೆ, ಮೂರು ತತ್ವಗಳ ಅಸ್ತಿತ್ವದ ಅವರ ಸಮರ್ಥನೆ, ಅಂದರೆ ಪರಮ ಪುರುಷ (ಈಶ್ವರ), ಆತ್ಮ (ಚಿತ್) ಹಾಗೂ ಆತ್ಮವಲ್ಲದ್ದು (ಅಚಿತ್). ಈ ಮೂರರಲ್ಲೂ ಒಂದರಿಂದ ಮತ್ತೊಂದರ ನಡುವಣ ನಿರ್ದಿಷ್ಟವಾದ ಬಾಹ್ಯ ಅಸ್ತಿತ್ವವಿದೆ.ಮಾನವನ ಆತ್ಮದ ಪ್ರತ್ಯೇಕ ಅಸ್ತಿತ್ವವನ್ನು ಶಂಕರಾಚಾರ್ಯರು ಮಾಯೆಯೆಂದು ಪರಿಗಣಿಸಿದರು, ಆದರೆ ರಾಮಾನುಜರು ಮಾನವರ ಆತ್ಮಗಳು ಚಿರಂತನವಾಗಿ ಹಾಗೂ ಅತ್ಯಗತ್ಯವಾಗಿ ಒಂದು ಸರ್ವವ್ಯಾಪಿಚೇತನ ದಿಂದ ಬೇರೆಯಾದುದು ಎಂದು ಪ್ರತಿಪಾದಿಸಿದರು. ಮಾಯ ಅಥವಾ ಪ್ರಕೃತಿಯು ವಿಶ್ವವನ್ನು ಸೃಷ್ಟಿಸಿದ ಅಪಾದನ-ಕರಣದ ಮೂಲ ಕಾರಣವಲ್ಲ. ಸ್ವತಃ ದೇವರೇ ವಿಶ್ವದ ಕರ್ತನೂ, ಹಾಗೂ ವಿಶ್ವದ ಸ್ಥಾಪನೆಗೆ ಗಣನೀಯ ಕಾರಣಭೂತನೂ ಆತನೇ; ವಿಶ್ವ-ದೇವರೀರ್ವರೂ ದೇಹ ಹಾಗೂ ಆತ್ಮದಂತೆ, ಒಬ್ಬರೊಂದಿಗೊಬ್ಬರು ನಿಂತರು. ವಿಶಿಷ್ಟಾದ್ವೈತದ ಆತನ ತತ್ವಚಿಂತನೆಯು ವೈಯಕ್ತಿಕ ದೇವರಿಗೆ ಭಕ್ತಿಪೂರ್ವಕ ಹೃದಯದೊಂದಿಗೆ ಆರಾಧಿಸುವ ಆಸ್ವದವನ್ನು ಒದಗಿಸಿತು. ಆತನ ತತ್ವಚಿಂತನೆಯು ಒಗ್ಗಟಿನ ಮೂರು ಚಿಂತನೆಗಳಿಗೆ ಎಡೆ ಮಾಡಿಕೊಟ್ಟಿವೆ; ದೇವರು ಹಾಗೂ ಮಾನವರ ಆತ್ಮಗಳ ಪ್ರತ್ಯೇಕ ಸ್ವರೂಪವನ್ನು ಒಳಗೊಂಡ ದ್ವಂದ್ವತೆ, ಹಾಗೂ; ದೇವರು, ಮಾನವ ಹಾಗೂ ಗೋಚರ ವಿಶ್ವವನ್ನು ಒಳಗೊಂಡ ಬಹುತ್ವ, ಹಾಗೂ ಈ ಎಲ್ಲವೂ ಒಂದರಿಂದ ಒಂದು ಪ್ರತ್ಯೇಕವಾಗಿರುವುದನ್ನು ಅಂಗೀಕರಿಸಿವೆ. ಮಧ್ವರ ಬೋಧನೆಗಳ ವಿಶಿಷ್ಟ ಅಂಶವೆಂದರೆ, ರಾಮಾನುಜರ ಮೂರು ತತ್ವಗಳ ಬದಲು, ಎರಡು ಪ್ರತ್ಯೇಕ ತತ್ವಗಳಿವೆ ಹಾಗೂ ಇವುಗಳ ಮಧ್ಯೆ ಅವಲಂಬಿತ ಹಾಗೂ ಸ್ವತಂತ್ರ ಆತ್ಮ ಹಾಗೂ ದೇವರ ನಡುವಣ ಸಂಬಂಧವಿದೆ. ಬೌದ್ಧ ಧರ್ಮ ಹಾಗೂ ಜೈನ ಮತಗಳು ಸುಧಾರಣಾ ಧರ್ಮಗಳಾಗಿದ್ದು, ಅವು ವೇದಾಂತ, ಬ್ರಾಹ್ಮಣೀಯ ಹಿಂದೂತ್ವ ಹಾಗೂ ಅದರ ರೂಪಾಂತರಗಳಾದ, ಶೈವ ಹಾಗೂ ವೈಷ್ಣವ ತತ್ವಗಳಿಗೆ ವಿರೋಧಾಭಾಸದಲ್ಲಿದ್ದವು, ಏಕೆಂದರೆ, ಅವು ವೇದಗಳ ದೋಷಾತೀತತೆ ಹಾಗೂ ಜಾತಿ ವರ್ಗಗಳನ್ನು ತಿರಸ್ಕರಿಸಿ, ಬಲಿ ನೀಡುವಿಕೆಯತ್ತ ಆಳವಾದ ಜಿಗುಪ್ಸೆ ಯನ್ನು ಮೈಗೂಡಿಸಿಕೊಂಡಿದ್ದವು.

## ಆಸ್ತಿಕ ವಾದ

ಪಾಶುಪತ, ಕಾಳಾಮುಖ, ಲಾಕುಲ ಹಾಗೂ ಮಹೇಶ್ವರ ಪಂಥಗಳಂತಹ ಹಲವಾರು ವಿಭಿನ್ನ ಶೈವ ತತ್ವಚಿಂತನಾ ಪಂಥಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ತಮ್ಮ ಮತವನ್ನು ಕ್ರಿ.ಶ. ೧೧ನೆಯ ಶತಮಾನಕ್ಕೆ ಮುನ್ನ ಅನುಸರಿಸಿವೆ ದೇಶದ ಅತ್ಯಂತ ಜನಪ್ರಿಯವಾದ ಕಾಳಾಮುಖ ಶೈವತ್ವವು, ಕಾಶ್ಮೀರ ಶೈವತ್ವದೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದು, ಆ ಮುನಿಗಳು ಮಹಾನ್ ಶಿಕ್ಷಣಜ್ಞರಾಗಿದ್ದು, ಕರ್ನಾಟಕದಾದ್ಯಂತ ಅವರು ನಿರ್ಮಿಸಿದ ಹಲವಾರು ದೇವಾಲಯಗಳಲ್ಲಿ ಮುಖ್ಯಸ್ಥರಾಗಿದ್ದರು. ಪಾಶುಪತ, ಕಾಲಮುಖ, ಭೈರವ ಹಾಗೂ ವಾಮಚಾರದಂತಹ ಸಂಪ್ರದಾಯವಾದಿ ಶೈವ ತತ್ವಚಿಂತನೆಯ ಹಲವಾರು ರೂಪಗಳು ಕ್ರಿ.ಶ. ೧೨ನೆಯ ಶತಮಾನದಲ್ಲಿ ಪಾಶುಪತ ರೀತಿಯ ಶೈವ ತತ್ವಚಿಂತನೆಯ ಪುನರುಜ್ಜೀವನದಿಂದ ನೇಪಥ್ಯಕ್ಕೆ ಸರಿದವು – ಇದಕ್ಕೆ ವಿಶೇಷ ಕುಮ್ಮಕ್ಕು ದೊರೆತ ಕಾರಣವೆಂದರೆ ಸಾಮಾಜಿಕ ಪರಿವರ್ತನೆಯ ಹುರುಪು, ಜಾತಿ ಪದ್ಧತಿಯ ನಿರ್ಮೂಲನೆ ಹಾಗೂ ಸಹಜ ದ್ವೇಷಕ್ಕೆ ಕಾರಣವಾದ ಸಾಮಾಜಿಕ ನಿರ್ಬಂಧನೆಗಳು ಹಾಗೂ ಎಲ್ಲೆಗಳ ನಿರ್ಮೂಲನೆ. ಕ್ರಿ.ಶ. ೭ನೆಯ ಶತಮಾನದ ವೇಳೆಗೆ ಶೈವ ತತ್ವಚಿಂತನೆಯು ಶಿವನನ್ನು ಪರಮ ಪುರುಷ, ಅನಂತ ಎಂದು ಸಾರಿ ಶಾಶ್ವತ ಸ್ಥಾನಕ್ಕೆ ಏರಿಸುವುದರಲ್ಲಿ ಪರಿಣಮಿಸಿತು. ಶಂಕರಾಚಾರ್ಯರ ಕಾಲದಿಂದ ಬಹುತೇಕ ಕ್ರಿ.ಶ. ೧೪ನೆಯ ಶತಮಾನದ ಅಂತ್ಯದವರೆಗೆ ಸ್ವಯಂಪೂರ್ಣ ಆದರ್ಶವಾದದಿಂದ ಸ್ವಯಂಪೂರ್ಣ ಆಸ್ತಿಕವಾದ ದವರೆಗೆ ಬದಲಾದ ಚಳವಳಿಯಾಯಿತು. ಶೈವ ತತ್ವಚಿಂತನೆಯು ವಿಘಟನೆ, ಮರುಸಮನ್ವಯತೆ ಹಾಗೂ ನಿರ್ವಹಣೆಯ ನಿರಂತರ ಪುನರಾವರ್ತನೆಯಾಗುವ ಶಾಶ್ವತ ಚಕ್ರದ ಮೂರು ಪ್ರಕ್ರಿಯೆಗಳ ಅಧಿಪತಿಯಾದ ದೇವರಿಗೆ ತೋರುವ ಪ್ರತ್ಯೇಕ ವೈಯುಕ್ತಿಕ ಭಕ್ತಿಯಾಯಿತು.

ಮತ್ತೊಬ್ಬ ತತ್ವಜ್ಞಾನಿಯಾದ ಬಸವೇಶ್ವರರು ತಮ್ಮ ವಚನಗಳಲ್ಲಿ ಪುರಾತನ ಕಾಲದ ಆಚಾರ್ಯರ ಉಲ್ಲೇಖವನ್ನು ಮಾಡುತ್ತ, ತಮ್ಮ ಧಾರ್ಮಿಕ ಸಂಶೋಧನೆಯ ತಳಹದಿಯು ಅವರ ಪರಿಶೋಧನೆಯ ಮೇಲೆ ನಿಂತಿವೆ ಎಂದು ತಿಳಿಸಿದ್ದಾರೆ. ಬಸವೇಶ್ವರರಿಗೆ ಅಂದಿನ ಕಾಲದ ಧರ್ಮಗಳ ಧಾರ್ಮಿಕ ಸಂಸ್ಕಾರದ ಅಂಶಗಳನ್ನು ಕುರಿತಾಗಿ ನಂಬಿಕೆ ಇರಲಿಲ್ಲ ಗುರು, ಲಿಂಗ ಹಾಗೂ ಜಂಗಮದ ಸಾಧನೆಗಳ ಮೂಲಕ ನೇರವಾಗಿ ದೈವತ್ವವನ್ನು ಹೊಂದುವುದರ ಪ್ರಾಮುಖ್ಯತೆಯನ್ನು ಕುರಿತಾಗಿ ಒತ್ತಿ ಹೇಳಿದರು. ಬಸವೇಶ್ವರರ ಪ್ರಕಾರ, ಜಂಗಮವು ನಿರ್ಲೇಪ, ನಿರುಪಾಧಿಕ, ನಿರಾಶ್ರಿತ, ನಿಷ್ಕರ್ಮ ಹಾಗೂ ನಿರ್ಲಂಪಟವಾದುದು. ಬಸವೇಶ್ವರರ ಗುರು, ಲಿಂಗ ಹಾಗೂ ಜಂಗಮದ ತತ್ವಕ್ಕೂ ಬುದ್ಧನ ಧರ್ಮ ಹಾಗೂ ಸಂಘಕ್ಕೆ ಸಾಂಕೇತಿಕ ಹೋಲಿಕೆಯಿದೆ. ವೀರಶೈವತತ್ವ ಚಿಂತನೆಯ ಆಗಮ ಅಂಶವು ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷ ಹಾಗೂ ಮಂತ್ರಗಳನ್ನು ಒಳಗೊಂಡಿದೆ.

## ಕ್ರಿಯಾಶೀಲ ಅವಧಿ

ಕರ್ನಾಟಕದಲ್ಲಿ, ಧರ್ಮ ಹಾಗೂ ತತ್ವಜ್ಞಾನಗಳಲ್ಲಿನ ಕ್ರಿಯಾಶೀಲ ಅವಧಿಯು, ಬಸವೇಶ್ವರರ ವೀರಶೈವ ತತ್ವಚಿಂತನೆಯೊಂದಿಗೆ ನಂಟನ್ನು ಹೊಂದಿದೆ. ಕರ್ನಾಟಕದ ನಾಗರಿಕತೆಯ ಕ್ರಿಯಾತ್ಮಕ ಅವಧಿಯ ಪ್ರಾರಂಭವು ವಿಮರ್ಶೆಯ ಪೂರ್ವಗ್ರಹ  ಹಾಗೂ ಕಟ್ಟುಪಾಡುಗಳಿಲ್ಲದ ಚೈತನ್ಯದ ಪುನರುಜ್ಜೀವನವಾಗಿದೆ. ದರ್ಶನ–ಪೂರ್ವ ಅವಧಿಯಲ್ಲಿ ಈ ಪ್ರದೇಶದಿಂದ ಬೌದ್ಧ ಧರ್ಮವನ್ನು ಹೊರಗಿಟ್ಟದ್ದು ಈ ಚೈತನ್ಯವೇ. ಪ್ರಾರಂಭಿಕ ದರ್ಶನಾವಧಿಯಲ್ಲಿ, ಈ ಚೈತನ್ಯವು ಸುಪ್ತವಾಗಿದ್ದು ಚಿಂತನೆಗಿಂತ ಭಾಷೆಯಲ್ಲಿ ಹೆಚ್ಚು ಆನಂದವನ್ನು ಪಡೆದಂತೆ ತೋರುತ್ತದೆ. ಈ ವಿಮರ್ಶಾತ್ಮಕ ಚೈತನ್ಯವು, ನಂತರದ ದಾರ್ಶನಿಕ ಅವಧಿಯಲ್ಲಿ ನಿರ್ದಿಷ್ಟ ವೇದಾಂತ ಚಿಂತನೆಗಳ ಮೆಚ್ಚುಗೆ ಹಾಗೂ ಅಳವಡಿಕೆಯಿಂದ ಪ್ರಚೋದನೆಗೊಂಡಿತು. ಶಂಕರಾಚಾರ್ಯ ಹಾಗೂ ರಾಮಾನುಜಾಚಾರ್ಯರ ತತ್ವಚಿಂತನೆಗಳು ಪುರಾತನ ವೇದಾಂತ ಚಿಂತನೆಯನ್ನು ಪುನರುಜ್ಜೀವನಗೊಳಿಸಿದವು.

ವೀರಶೈವತತ್ವ ಚಿಂತನೆಯು ಕರ್ನಾಟಕದಲ್ಲಿ ಪ್ರತಿಪಾದಿತವಾಗಿ ತಜ್ಞರು ತಮ್ಮ ದೈನಂದಿನ ಜೀವನದಲ್ಲಿ ಅದನ್ನು ನಿಷ್ಠೆಯಿಂದ ಆಚರಣೆ ಮಾಡುವ ಮೂಲಕ ಬಲಗೊಳಿಸಿದರು. ಈ ಪದ್ಧತಿಯನ್ನು ವೀರಶೈವ ತತ್ವಚಿಂತನೆಯೆಂದು ಕರೆಯಲಾಗಿದೆ, ಏಕೆಂದರೆ ಅದು ಶಿವನಿಗೆ ಪರಿಪೂರ್ಣವಾಗಿ ಸಮರ್ಪಣೆಯಾಗಿದ್ದು ಈ ಪದ್ಧತಿಯ ಅನುಯಾಯಿಗಳನ್ನು ವೀರಶೈವರೆಂದು ಕರೆಯುತ್ತಾರೆ; ಏಕೆಂದರೆ ಅದು ಶಿವನಿಗೆ ಸಂಪೂರ್ಣವಾಗಿ ಸಮರ್ಪಣೆಯಾದ ಹಾಗೂ ಶಿವನನ್ನು ಪ್ರತಿಪಾದಿಸುವ ಚಿಂತನೆಯ ವ್ಯವಸ್ಥೆಯಾಗಿದೆ. ೧೦೧ ಹಂತಗಳಿಂದ ಗುರುತಿಸಲ್ಪಟ್ಟ ಸಾಕ್ಷಾತ್ಕಾರಗಳ ಸರಮಾಲೆಯ ಮೂಲಕ ಶಿವನ ಜ್ಞಾನವು ಮೂಡುತ್ತದೆ. ಪ್ರಗತಿಶೀಲ ಪ್ರಕಾರದಲ್ಲಿ ಅವುಗಳನ್ನು ಆರು ವರ್ಗಗಳ ಅಡಿಯಲ್ಲಿ ಅಧ್ಯಯನ ಮಾಡಲಾಗುತ್ತದೆ. ಕ್ರಿ.ಶ.೧೪ನೆಯ ಶತಮಾನದಲ್ಲಿ, ಈ ಬೋಧನೆಗಳಿಗೆ ಸಂಬಂಧಿಸಿದ ಬ್ರಹ್ಮಸೂತ್ರ ಭಾಷ್ಯವನ್ನು ಶ್ರೀಕರಪಂಡಿತನು ಬರೆದನು.

ಈ ಸಂದರ್ಭದಲ್ಲಿ ಹೆಸರಿಸಬಹುದಾದ ಇತರ ವಚನಕಾರರೆಂದರೆ ಪ್ರಭುದೇವ (ಅಲ್ಲಮ ಪ್ರಭು), ಬಸವೇಶ್ವರ, ಚನ್ನಬಸವ, ಸಿದ್ದರಾಮ ಹಾಗೂ ಅಕ್ಕಮಹಾದೇವಿ. ಅವರು ಕ್ರಿ.ಶ. ೧೨ನೆಯ ಶತಮಾನಕ್ಕೆ ಸೇರಿದವರಾಗಿದ್ದು ಅವರನ್ನು ಶಿವಶರಣರು ಎಂದು ಕರೆಯುತ್ತಾರೆ; ಇವರೆಲ್ಲರೂ, ವೀರಶೈವದ ಚಿಂತನೆ ಹಾಗೂ ಆಚರಣೆಗೆ ಗಣನೀಯವಾದ ಕೊಡುಗೆಗಳನ್ನು ನೀಡಿದ್ದಾರೆ. ಅವರ ಪೈಕಿ, ಪ್ರಭುದೇವನು ಅತ್ಯಂತ ಹಿರಿಯನು. ಆತನ ಕಾಲದ ಶಿವ ಶರಣರ ಪೈಕಿ ಅತ್ಯುತ್ತಮನಾಗಿದ್ದನು. ನಿರ್ಲಿಪ್ತತೆ ಹಾಗೂ ವಿವೇಕಗಳು ಆತನ ಹೆಗ್ಗುರುತುಗಳಾಗಿದ್ದವು. ವೀರಶೈವವೂ ಸೇರಿದಂತೆ, ಎಲ್ಲ ಮತಾಚರಣೆಗಳ ಕುರಿತಾಗಿ, ಅವರು ಕಟು ಟೀಕಾಕಾರರಾಗಿದ್ದರು. ಸತ್ಯವನ್ನು ಎಲ್ಲೇ ಕಂಡರೂ ಅದನ್ನು ಮೆಚ್ಚುತ್ತಿದ್ದು  ವಿಮರ್ಶೆಗಳಿಗೆ ಗೌರವ ನೀಡುತ್ತಿದ್ದರು. ಅವರು ಅನುಭವ ಮಂಟಪದ ಶೂನ್ಯ ಸಿಂಹಾಸನದ ಅಧ್ಯಕ್ಷರಾಗಿದ್ದರು. ಆದರೆ ಎಲ್ಲ ಶಿವಶರಣರ ಪೈಕಿ, ಬಸವೇಶ್ವರರು ಅತ್ಯಂತ ಪ್ರಭಾವಶಾಲಿಯಾಗಿದ್ದರು. ಹುಟ್ಟಿನಿಂದ ಬ್ರಾಹ್ಮಣರಾದ ಅವರು, ನಂಬಿಕೆಯಿಂದ ವೀರಶೈವದ ಅನುಯಾಯಿಗಳಾದರು. ಅತ್ಯಂತ ಹುಮ್ಮಸ್ಸಿನಿಂದ, ವೀರಶೈವ ಸಿದ್ಧಾಂತದ ಸಾರವು ಪ್ರೇಮ ಹಾಗೂ ಕಾರ್ಯಶೀಲತೆ ಅಥವಾ ಕಾಯಕಗಳೆಂದು ಬೋಧಿಸಿದರು. ಅವರು ವೀರಶೈವೇತರ ಚಿಂತನೆಗಳ ಮಹಾನ್ ಟೀಕಾಕಾರರಾಗಿದ್ದು, ವೀರಶೈವ ತತ್ವಚಿಂತನೆಯ ಬಲವಾದ ಸಮರ್ಥಕರಾಗಿದ್ದರು, ಆದರೆ ಅವರ ಟೀಕೆ–ವಿಮರ್ಶೆಗಳು ಎಂದೂ ವಿಚ್ಛಿದ್ರಕಾರಿಯಾಗಿರಲಿಲ್ಲ. ಭಕ್ತಿಯು ಜ್ಞಾನವನ್ನು ಹೀರುವ ಭಾಷೆಯಾಗಿದ್ದು ಕರ್ಮವು ಜ್ಞಾನದ ಜೀವಾಳವೆಂದರು. ಕಳಚುರಿ ಬಿಜ್ಜಳನ ಕಲ್ಯಾಣ ಸಾಮ್ರಾಜ್ಯದಲ್ಲಿ ಬಸವೇಶ್ವರರು ಮಂತ್ರಿಯಾಗಿದ್ದಾಗಲೇ, ವಿಶಿಷ್ಟ ಚಿಂತನಾ ವ್ಯವಸ್ಥೆಯೊಂದರ ಪ್ರತಿಪಾದಕರೂ ಆಗಿದ್ದರು. ಭಕ್ತಿ ಹಾಗೂ ಕರ್ಮಗಳೆರಡರಲ್ಲೂ ಅಭಿವ್ಯಕ್ತವಾಗುವ ಜ್ಞಾನದ ಮೌಲ್ಯವನ್ನು ನೋಡುವ ಅವಕಾಶಗಳು ದೊರೆತವು. ಷಟ್‌ಸ್ಥಳ ವಚನದಲ್ಲಿನ ಬಸವಣ್ಣ ಕೆಲವು ಹೇಳಿಕೆಗಳನ್ನು ಗಮನಿಸಿದಾಗ, ವ್ಯಕ್ತಿಯಾಗಿ ಹಾಗೂ ಚಿಂತಕನಾಗಿ ಬಸವೇಶ್ವರರ ಅಪರೂಪದ ಹಿರಿಮೆಯನ್ನು ಅವು ತೆರೆದಿಡುತ್ತದೆ. ಆತನು, "ಕಲ್ಲಿನಲ್ಲಿ ಕೆತ್ತಿದ ಹಾವನ್ನು ಕಂಡರೆ ಜನರು ಅದಕ್ಕೆ ಹಾಲೆರೆಯುತ್ತಾರೆ. ನಿಜವಾದ ಹಾವನ್ನು ಕಂಡರೆ, ಅದನ್ನು ಕೊಲ್ಲಲು ಹೇಳುತ್ತಾರೆ. ನಿರ್ಗತಿಕ ಜಂಗಮನು ಬಂದರೆ, ಅವನನ್ನು ದೂಡುತ್ತಾರೆ, ಆದರೆ ತಿನ್ನಲು ಆಗದ ಜಡ ಲಿಂಗಕ್ಕೆ ಆಹಾರ ಅರ್ಪಿಸುತ್ತಾರೆ.  ಒಮ್ಮೆಲೇ ಕೂಡಲ ಸಂಗಮನನ್ನೂ, ಇತರ ದೇವರನ್ನು ಆರಾಧಿಸುವ, ತಮ್ಮನ್ನು ತಾವು ಭಕ್ತರೆಂದು ಕರೆದುಕೊಳ್ಳುವ ಮೂಢ ಜನರಿಗೆ ನಾನು ಏನೆಂದು ಹೇಳಲಿ?," ಎಂದು ಬಸವಣ್ಣ ಹೇಳಿದ್ದಾರೆ.

ಆದರೂ ವೈದಿಕ ಸಂಸ್ಕೃತಿಯು ವೈದಿಕರ ತತ್ವಚಿಂತನೆಯ ಪರಿಕಲ್ಪನೆಯನ್ನು ರೂಪಿಸುವುದನ್ನು ಮುಂದುವರಿಸಿತು.  ಈ ಜೀವನದ ನಶ್ವರ  ವಸ್ತುಗಳ ಮಟ್ಟದಿಂದ ಮೇಲಕ್ಕೇರುವ ಹಂಬಲವೇ ಧರ್ಮ; ತತ್ವಚಿಂತನೆಯು ಅಸ್ತಿತ್ವದ ಅರ್ಥವನ್ನೂ ಹಾಗೂ ಜೀವನದ ನಿಜವಾದ ಮೌಲ್ಯಗಳನ್ನೂ ಅರಿತುಕೊಳ್ಳುವ ಹಾಗೂ ಕತ್ತಲಿನಿಂದ ಬೆಳಕಿನೆಡೆಗೆ ಮಾನವನ ಪಯಣದ ಯತ್ನವಾಗಿದೆ; ಮಾನವ ಹೃದಯವನ್ನು ತುಂಬುವ ಸೌಂದರ್ಯದ ಪ್ರಜ್ಞೆಯ ಬಾಹ್ಯ ಅಭಿವ್ಯಕ್ತತೆಯು ಕಲೆಯಾಗಿದೆ– ಇವು ಸಾಂಸ್ಕೃತಿಕ ಜೀವನದ ಅವಶ್ಯಕ ಅಂಶಗಳಾಗಿದ್ದು, ಈ ಎಲ್ಲ ಅಂಶಗಳಲ್ಲೂ ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆಯು ಅಪಾರವಾದುದು.

ಉತ್ತರದ ಸಂಸ್ಕೃತಿಯಂತೆ, ದಕ್ಷಿಣದ ಸಂಸ್ಕೃತಿಯೂ ಮೂಲಭೂತವಾಗಿ ಆಧ್ಯಾತ್ಮಿಕ ಸ್ವರೂಪವನ್ನು ಹೊಂದಿದ್ದು, ಕರ್ನಾಟಕದಲ್ಲಿ ಅವೆರಡೂ ಉತ್ತಮ ರೀತಿಯಲ್ಲಿ ಮೇಳೈಸಿದ್ದವು. ಬಹಳಷ್ಟು ವ್ಯತ್ಯಾಸವಿರುವ ವಿಭಿನ್ನ ಧರ್ಮಗಳು ಕರ್ನಾಟಕದಲ್ಲಿ ನೆಲೆ ಕಂಡವು. ಏಕೆಂದರೆ ಜನರ ಧಾರ್ಮಿಕ ಮನಸ್ಸಿನ ವಿಶಿಷ್ಟ ಗುಣವೇ ಸಹಿಷ್ಣುತೆಯಾಗಿತ್ತು. ಬೌದ್ಧ ಹಾಗೂ ಜೈನ ಧರ್ಮಗಳು ಕರ್ನಾಟಕಕ್ಕೆ ಬಂದು ಅಭಿವೃದ್ಧಿ ಹೊಂದಿದವು. ಭಾರತದ ಬೇರೆಡೆಗಿಂತ, ಜೈನ ಧರ್ಮಕ್ಕೆ ಇಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಏಸುಕ್ರಿಸ್ತನ ಮರಣದ ಕೇವಲ ನೂರು ವರ್ಷಗಳ ಒಳಗೆ, ಕ್ರೈಸ್ತ ಧರ್ಮವು ಭಾರತಕ್ಕೆ ಬಂದು, ಪಶ್ಚಿಮ ಕರಾವಳಿಯಲ್ಲಿ ತನ್ನನ್ನು ತಾನು ಸ್ಥಾಪಿಸಿಕೊಂಡಿತೆಂದು ತೋರುತ್ತದೆ. ಬಹಳ ಪ್ರಾರಂಭಿಕ ಕಾಲದಿಂದಲೂ ಪಾಶ್ಚಿಮಾತ್ಯ ದೇಶಗಳ ಜೊತೆಗಿನ ಸಂಪರ್ಕ ಹಾಗೂ ಅವರ ಧರ್ಮಗಳ ಬಗೆಗಿನ ತಿಳುವಳಿಕೆಯು, ಕರ್ನಾಟಕದ ಜನರಲ್ಲಿ ಪರಧರ್ಮಗಳ ಬಗೆಗಿನ ಹೊಂದಿಕೊಳ್ಳುವ ಪ್ರವೃತ್ತಿ ಹಾಗೂ ಅತೀವ ಸಹಿಷ್ಣುತೆಯನ್ನು ನಿರ್ಧರಿಸಿದ ಅಂಶಗಳಾಗಿರಬಹುದು. ಸಿಂದ್ ಪ್ರದೇಶದಲ್ಲಿ ಮುಸಲ್ಮಾನರು ಪಾದಾರ್ಪಣೆ ಮಾಡುವುದಕ್ಕಿಂತ ಬಹಳ ಮುನ್ನವೇ, ಅರೇಬಿಯಾದ ವ್ಯಾಪಾರಿಗಳ ಮೂಲಕ ಇಸ್ಲಾಂ ಧರ್ಮವೂ ಸಹ ಕರ್ನಾಟಕದ ಸಂಪರ್ಕಕ್ಕೆ ಬಂದಿರಬೇಕು. ಮಹೋನ್ನತ ಹಿಮಾಲಯದಿಂದ ಪ್ರೇರಣೆ ಪಡೆದು, ಬ್ರಹ್ಮಪುತ್ರ ಹಾಗೂ ಗಂಗಾ ನದಿಯ ಬಯಲುಗಳಲ್ಲಿ ಶೃತಿಗಳು ಹಾಗೂ ಸ್ಮೃತಿಗಳು ಜನ್ಮ ತಾಳಿರಬಹುದು; ಆದರೆ ಶೃತಿ ಹಾಗೂ ಸ್ಮೃತಿಗಳ ಅತ್ಯಂತ ಮಹಾನ್ ವ್ಯಾಖ್ಯಾನಕಾರರು ಹಾಗೂ ಪ್ರತಿಪಾದಕರು ಕರ್ನಾಟಕದಲ್ಲಿ ಜನಿಸಿದರು. ಅವರ ಮತಧರ್ಮಶಾಸ್ತ್ರದ ಚಿಂತನೆಗಳು ಹಾಗೂ ಸೈದ್ಧಾಂತಿಕ ಕ್ರಮಗಳು ದೇಶದೆಲ್ಲೆಡೆ ಹರಡಿತು. ವಿಶ್ವದ ನಿಗೂಢತೆ ಹಾಗೂ ಅದರಲ್ಲಿನ ಮಾನವ ಜೀವನವನ್ನು ಕುರಿತಾಗಿ ಚಿಂತನೆ ಮಾಡಲು ಆರ್ಯನ್ ಮನಸ್ಸು ಮಾನವ ಚಿಂತನೆಯ ಉತ್ತುಂಗದ ಎಲ್ಲೆಗಳನ್ನು ಮುಟ್ಟಿತು. ಈ ಪ್ರಕ್ರಿಯೆಯಲ್ಲಿ, ವಿಶ್ವದಲ್ಲಿ ಬೇರೆಲ್ಲೂ ಕಾಣದ ಉಪನಿಷತ್ತುಗಳು ಹಾಗೂ ಮಹಾಕಾವ್ಯಗಳಲ್ಲಿ ಸೂಕ್ಷ್ಮ ಅಭಿವ್ಯಕ್ತತೆಯನ್ನು ಪಡೆಯಿತು. ಅತ್ಯಾವಶ್ಯಕವಾದ ಮಾನವೀಯ ಅಂಶಗಳನ್ನು ಬೌದ್ಧ ಹಾಗೂ ಜೈನ ಮತಗಳು ಒದಗಿಸಿದವು; ಆದರೆ, ದಕ್ಷಿಣದ ಅತ್ಯಂತ ಮಹಾನ್ ಬೋಧಕರಾದ – ಶಂಕರ, ರಾಮಾನುಜ ಹಾಗೂ ಮಧ್ವರು ಹಿಂದೂ ಧರ್ಮವನ್ನು ಕೈಗೆತ್ತಿಕೊಂಡು, ಭಕ್ತಿಯ ಅಂಶವನ್ನು ಒತ್ತಿಹೇಳುವ ಅದನ್ನು, ಸಾಮಾನ್ಯ ಜನರಲ್ಲಿ ಹರಡುವ ಮೂಲಕ, ಅದನ್ನು ಮತ್ತಷ್ಟು ಪರಿಪಕ್ವಗೊಳಿಸಿದರು.

## ಭಕ್ತಿ ಚಳವಳಿ

ಭಗವದ್ಗೀತೆ ಹಾಗೂ ಭಾಗವತ–ಪುರಾಣಗಳಲ್ಲಿ ಪರಿಪೂರ್ಣವಾಗಿ ಪ್ರತಿಪಾದಿಸಿರುವಂತೆ, ಪ್ರೇಮ ಹಾಗೂ ಶ್ರದ್ಧೆ ಅಥವಾ ಭಕ್ತಿಯ ಮೂಲಕ ಮೋಕ್ಷವನ್ನು ಪಡೆಯುವ ಸಿದ್ಧಾಂತವನ್ನು ಬೋಧಿಸಿದ ಮೊಟ್ಟಮೊದಲಿಗ ಸಂತರಲ್ಲಿ ರಾಮಾನುಜ, ಮಧ್ವ ಹಾಗೂ ಬಸವೇಶ್ವರರು ಇದ್ದಾರೆ. ಪ್ರೇಮ ಹಾಗೂ ಶ್ರದ್ಧೆಗಳ ಮಾರ್ಗ, ಅಂದರೆ ಭಕ್ತಿ–ಮಾರ್ಗವು, ಜ್ಞಾನ ಹಾಗೂ ಕರ್ಮಗಳ ಹಾದಿ, ಅಂದರೆ ಜ್ಞಾನ–ಮಾರ್ಗ ಹಾಗೂ ಕರ್ಮ–ಮಾರ್ಗಗಳ ಹೋಲಿಕೆಯಲ್ಲಿ ಸಾಮಾನ್ಯ ಜನರ ಮನಸ್ಸಿನಲ್ಲಿ ಮೀರಿ ಬೆಳೆಯಿತು.

ದೇವರತ್ತ ಆತ್ಮವು ತೋರುವ ಗಾಢವಾದ ಭಕ್ತಿ ಹಾಗೂ ಸಮರ್ಪಣೆಯು, ಸ್ವರ್ಗವನ್ನು ಪಡೆಯುವ ಒಂದೇ ಪಥವೆಂದು ಭಕ್ತಿ ಚಿಂತನೆಯು ಒತ್ತಿ ಹೇಳುತ್ತದೆ. ಈ ಭಕ್ತಿಯ ಹಂತಗಳು ಸ್ವಾಮಿ ಹಾಗೂ ಸೇವಕ, ತಂದೆ ಹಾಗೂ ಮಗು, ಪ್ರೇಮಿ ಹಾಗೂ ಪ್ರೇಮಿಸುವವರಾಗಿ ಇರಬಹುದು ಅಥವಾ, ಕೆಲವು ವೈಷ್ಣವ ಸಂತರು ಬೋಧಿಸಿರುವಂತೆ, ದೇವಸ್ವರೂಪದ ಪ್ರಶಾಂತ ಚಿಂತನೆ (ಶಾಂತಿ), ಕ್ರಿಯಾತ್ಮಕ ಸೇವೆ (ದಾಸ್ಯ), ವೈಯಕ್ತಿಕ ಸ್ನೇಹಪರತೆ (ಸಖ್ಯ), ಭ್ರಾತೃತ್ವ ಭಾವ (ವಾತ್ಸಲ್ಯ), ಅಥವಾ ಪ್ರಿಯಕರನನ್ನು ಪ್ರೀತಿಪೂರ್ಣವಾಗಿ ಪರಿಗಣಿಸುವ ಪ್ರೇಮಿಯೂ (ಮಾಧುರ್ಯ)ಆಗಿರಬಹುದು. ಕರ್ನಾಟಕದೆಲ್ಲೆಡೆ, ಸಂತರು ಈ ಹಂತಗಳಲ್ಲಿ ಒಂದು ಅಥವಾ ಎಲ್ಲ ಭಾವನೆಗಳೂ ಮೋಕ್ಷವನ್ನು ಪಡೆಯುವ ಹಾಗೂ ಪರಮ ಪುರುಷನ ಸಾನ್ನಿಧ್ಯವನ್ನು ಹೊಂದುವ ಅಸ್ಖಲಿತ ವಿಧಾನವೆಂದು ಸಾರಿದರು. ಆತ್ಮ–ದೈವಗಳ ನಡುವಣ ಸಂಬಂಧದ ಕಲ್ಪನೆಯನ್ನು ವಧೂ–ವರರ ಸಂಬಂಧಕ್ಕೆ ಹೋಲಿಸುವ ಉಲ್ಲೇಖಗಳನ್ನು ವೈಷ್ಣವ ಸಾಹಿತ್ಯದಲ್ಲಿ ಹೇರಳವಾಗಿ ಕಾಣಬಹುದು. ಬಸವೇಶ್ವರರ ಪ್ರಕಾರ, ಸಾಕ್ಷಾತ್ಕಾರದ ಸಾರವು ಅತೀಂದ್ರಿಯ ವಿಷಯವಲ್ಲದೆ, ಎಡೆಬಿಡದ, ಬಾಗದ ಹಾಗೂ ಅವಿರತವಾದ ದೇವರ ಪ್ರೇಮವೆಂದು ತಿಳಿಸಿದರು; ಎಲ್ಲ ಮಹಾನ್ ತತ್ವಜ್ಞಾನಿಗಳು ಹಾಗೂ ಚಿಂತಕರು, ಪರಮ ಪುರುಷನತ್ತ ತೋರುವ ವೈಯಕ್ತಿಕ ಭಕ್ತಿಯ ಭಾವದ ಅಭಿವ್ಯಕ್ತತೆಯನ್ನು ಇದು ಪುನರುಚ್ಚರಿಸುತ್ತದೆ.

ಸುಮಾರು ೧೧ನೆಯ ಶತಮಾನದ ವೇಳೆಗೆ, ಭಾರತದ ಬಹುತೇಕ ಎಲ್ಲಾ ಪ್ರದೇಶಗಳಿಂದಲೂ ಶತಮಾನಗಳಿಂದ ನಿರಂತರವಾಗಿ ಹರಿದು ಬಂದ ಭಕ್ತಿಯ ಭಾವವು, ಜಾತಿ ಪದ್ಧತಿಯ ಅನನ್ಯತೆಯನ್ನು ಮೀರುವ ಹಾಗೂ ಸಾಮಾನ್ಯ ಭಕ್ತಿಯ ಮೂಲಕ ಎಲ್ಲ ವರ್ಗದ ಪುರುಷ–ಮಹಿಳೆಯರನ್ನೂ ಒಟ್ಟುಗೂಡಿಸುವ ಮೂಲಕ ಮಾನವಕುಲಕ್ಕೆ ನೆರವು ನೀಡುವಲ್ಲಿ ತಕ್ಕ ಮಟ್ಟಿಗೆ ಬಲವನ್ನು ತೋರಿತು. ಸಂತ ಜಾನ್, ಅಸ್ಸಿಸಿಯ ಸಂತ ಫ್ರಾನ್ಸಿಸ್, ಸಂತ ಅಗಸ್ಟೀನ್, ಸಂತ ಪಾಲರು ಹಾಗೂ ಸೂಫಿ ಸಂತರಾದ ಹಫೀಜ್, ಸರ್ಮದ್ ಹಾಗೂ ಜಲಾಲುದ್ದೀನ್ ರೂಮಿರು ಮೊದಲಾದವರು ದೇವರ ಅಪರಿಮಿತ ಪ್ರೇಮವನ್ನು ತುಂಬು–ಹೃದಯದಿಂದ ವ್ಯಕ್ತಪಡಿಸಿದರು. ಮಹಾರಾಷ್ಟ್ರ, ಕರ್ನಾಟಕ ಹಾಗೂ ಉತ್ತರ ಭಾರತದಲ್ಲಿ ನಂತರ ಬಂದ ಸಂತರೂ ಇದನ್ನೇ ಮಾಡಿದರು. ಬೌದ್ಧ ಧರ್ಮಕ್ಕಿಂತ ಮಹತ್ತರವಾದ, ಭಾರತವು ಹಿಂದೆಂದೂ ಕಾಣದ ಅತ್ಯಂತ ಮಹಾನ್ ಧಾರ್ಮಿಕ ಆಮೂಲಾಗ್ರ ಬದಲಾವಣೆಯನ್ನು ಭಾರತದ ಭಕ್ತಿ ಚಳವಳಿಯು ತಂದಂತೆ ತೋರುತ್ತದೆ; ಈ ಚಳವಳಿಯ ಅನುಯಾಯಿಗಳು, ಪ್ರೇಮದ ದೈವೀಕ ಪರಮಸತ್ಯವನ್ನು ಚಿಂತಿಸಿ, ಬೋಧಿಸಿ ಹಾಗೂ ಆಚರಿಸುವ ಮೂಲಕ, ಅತೀಂದ್ರಿಯ ಹಾಗೂ ಆಧ್ಯಾತ್ಮಿಕ ಆನಂದ ಪರವಶತೆಯ ವಾತಾವರಣದಲ್ಲಿ ಬಾಳಿ–ಬದುಕಿದರು.

ಎಲ್ಲ ಭೌತಿಕ ಸಿರಿಸಂಪತ್ತುಗಳನ್ನು ತ್ಯಜಿಸಿದ ಅಲೆಮಾರಿ ಭಕ್ತರಿಂದ ಕರ್ನಾಟಕವು ತುಂಬಿ ತುಳುಕುತ್ತಿತ್ತು. ಅಂತರ್‌ದೃಷ್ಟಿ, ಬ್ರಹ್ಮಾನಂದ, ಭಾವಾವೇಶ ಹಾಗೂ ಪವಾಡಗಳೂ ದೈನಂದಿನ ಘಟನೆಗಳಾದವು. ಆದಕಾರಣ, ಮೋಕ್ಷವು ಕೇವಲ ಕೆಲವು ಮಂದಿಗೆ ಸೀಮಿತವಾಗಿರದೆ, ಎಲ್ಲರಿಗೂ ತೆರೆದಿರುವುದೆಂಬ ಆಳವಾದ ಸಾಕ್ಷಾತ್ಕಾರವು ಮೂಡಿತು.

ವಿಷ್ಣು ಆರಾಧನೆಯ ನಿಗೂಢ ಪಂಚರಾತ್ರ, ಅತೀಂದ್ರಿಯ ವಿದ್ಯೆಯ ಶೈವತಂತ್ರ, ಮಾನವನ ಆತ್ಮ ಹಾಗೂ ದೈವದ ಸಂಬಂಧ, ಕೃಷ್ಣನಿಗೆ ಗೋಪಿಯರೊಂದಿಗಿನ ಸಂಬಂಧದ ನಿಜವಾದ ಸ್ವರೂಪವನ್ನು ಸೂಚಿಸುವ ಭಾಗವತ, ಶಾಂಡಿಲ್ಯನ ಸೂತ್ರಗಳು ಹಾಗೂ ನಾರದರ ಭಕ್ತಿ ಸೂತ್ರಗಳು ಶಂಕರ, ರಾಮಾನುಜ ಹಾಗೂ ಮಧ್ವರ ಸೈದ್ಧಾಂತಿಕ ವ್ಯವಸ್ಥೆಗಳು, ತಮಿಳು ಸಂತರು ಹಾಗೂ ಕಾಶ್ಮೀರ ಶೈವ ತತ್ವಚಿಂತನೆಯ ಭಕ್ತರ ಅನುಭಾವಿ ಚಿಂತನೆ – ಇವೆಲ್ಲದರ ಹಿನ್ನೆಲೆಯಲ್ಲಿ ಕರ್ನಾಟಕದ ಅಧ್ಯಾತ್ಮ ಜ್ಞಾನವು ಅಭಿವೃದ್ಧಿ ಹೊಂದಿ ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯಕ್ಕೆ ಎಡೆ ಮಾಡಿಕೊಟ್ಟಿತ್ತು; ಅತ್ಯುತ್ತಮ ಧಾರ್ಮಿಕ ಗುಣಗಳನ್ನು ಪಡೆದ ವಚನ ಹಾಗೂ ದಾಸ ಕೃತಿಗಳನ್ನು ಭಕ್ತರು ತಲೆತಲಾಂತರಗಳಿಂದ ಹಾಡುತ್ತ ಬಂದಿದ್ದಾರೆ.

ಸಿಂದ್‌ನ ಅಬು ಅಲಿಯ ಮೂಲಕ ಒಂಭತ್ತನೆಯ ಶತಮಾನದಲ್ಲಿ ಭಾರತೀಯ ಯೋಗದ ಪರಿಚಯವಾದ ಸೂಫಿ ಅನುಭಾವಿಗಳು, ಘನಾದ ಸಿದ್ಧಾಂತವನ್ನೂ ಹಾಗೂ ದೇವರಲ್ಲಿ ವ್ಯಕ್ತಿತ್ವದ ನಂಬಿಕೆ ಹಾಗೂ ಸೃಷ್ಟಿಕರ್ತನ ಮೂಲಕ ಅವನಲ್ಲಿ ವ್ಯಕ್ತಿತ್ವದ ಮುಂದುವರಿಕೆಯನ್ನು ಅದಾಗಲೇ ಅಭಿವೃದ್ಧಿ ಪಡಿಸಿದ್ದರು. ಸೂಫಿ ಸಿದ್ಧಾಂತವು ದೇವರಲ್ಲಿ ಬಲಿಷ್ಠವಾಗಿ ಸ್ಥಾಪಿತವಾದ ವ್ಯಕ್ತಿಗತ ಶ್ರದ್ಧೆಯಿಂದ ಹೊಮ್ಮಿದ್ದು, ಮಾಯಾವಾದ ಅದ್ವೈತದ ಕಠಿಣತೆಗಳಿಂದ ಬಿಡುಗಡೆಯ ಆಶ್ವಾಸನೆಯನ್ನು ನಿಜವಾದ ಭಕ್ತನಿಗೆ ಈ ಸಿದ್ಧಾಂತವು ತರಲು ಸಾಧ್ಯವಾಯಿತು. ಸಾಮಾನ್ಯ ಜನರ ಧಾರ್ಮಿಕ ಜೀವನಕ್ಕಾಗಿ ಸ್ಥೂಲ ಕೇಂದ್ರವೊಂದರ ಅಗತ್ಯವು ಬಹುಬೇಗನೆ ಪ್ರಕಟವಾಯಿತು. ಸಾಂಪ್ರದಾಯಿಕ ಧರ್ಮದ ಸ್ವಚ್ಛಂದ ಸ್ವಾತಂತ್ರ್ಯವನ್ನು ಸರಿಪಡಿಸಲು, ಗುರುವಿನ ಅಧಿಕಾರ ಹಾಗೂ ಅವನ ಮಾರ್ಗದರ್ಶನವು ಅನಿವಾರ್ಯವಾಗಿ ಹೆಚ್ಚಿತು, ಹಾಗಾಗಿ ಈಶ್ವರ, ಲಿಂಗ ಹಾಗೂ ಆಧ್ಯಾತ್ಮಿಕ ಮುಖಂಡನಾದ, ಜಂಗಮನನ್ನು ಶ್ರದ್ಧೆಯ ಆಧಾರವಾಗಿ ಗುರುತಿಸುವುದು ಪ್ರಾರಂಭವಾಯಿತು.

## ವೀರಶೈವ ಚಳವಳಿ

ಶೈವರ ಪೈಕಿ, ಬಹುಶಃ ಬಸವೇಶ್ವರರು ಭಕ್ತಿಯ ಅತ್ಯುತ್ತಮ ಪ್ರತಿಪಾದಕರಾಗಿದ್ದು ಅವರು ಸಂಗಮೇಶ್ವರನಿಂದ ಉನ್ಮತ್ತನಾಗಿದ್ದರು. ಕರ್ನಾಟಕದಲ್ಲಿ ಭಕ್ತಿ ಭಂಡಾರಿ ಬಸವಣ್ಣ ಎಂದು ಕರೆಯುತ್ತಾರೆ. ಇವರು, "ದೇವರೆ, ನನ್ನಲ್ಲಿ ಕರುಣೆ ಇರಲಿ, ಓ ಈಶ್ವರನೇ, ಭಕ್ತನ ಸಂತಸವೇ ನಿನ್ನ ಸಂತಸವಾಗಲಿ, ಆ ವ್ಯಕ್ತಿತ್ವವೇ ನಿನ್ನ ವ್ಯಕ್ತಿತ್ವವಾಗಲಿ, ಆ ಜೀವಸೆಲೆಯೇ ನಿನ್ನ ಉಸಿರಾಗಲಿ, ಹಾಗೂ ಅವನ ದೇಹವು ನಿನ್ನ ದೇಹದ ಅಭಿವ್ಯಕ್ತತೆ ಆಗಲಿ," ಎಂದಿದ್ದಾರೆ. ತಮ್ಮ ಅನುಯಾಯಿಗಳಿಗೆ ಅವರು "ನಮ್ಮ ಕೂಡಲ ಸಂಗಮದೇವನು ಸಂಗೀತ ಪ್ರಿಯನಲ್ಲ, ವೇದಪ್ರಿಯನೂ ಅಲ್ಲ, ಆದರೆ ಭಕ್ತಿಪ್ರಿಯ," ಎಂದು ಹೇಳಿದ್ದಾರೆ.

ಅತ್ಯಂತ ಮಹಾನ್ ಭಕ್ತರಲ್ಲಿ ಒಬ್ಬರಾದ ಹಾಗೂ ಸಂತರ ಪೈಕಿ ಅತ್ಯಂತ ಚಿತ್ತಾಕರ್ಷಕ ವ್ಯಕ್ತಿತ್ವದವರೆಂದರೆ ಅಕ್ಕ ಮಹಾದೇವಿ. ಈ ಮಹಾನ್ ಸಂತಳು ಬಸವೇಶ್ವರ ಹಾಗೂ ಅಲ್ಲಮ ಪ್ರಭುಗಳ ಸಮಕಾಲೀನಳಾಗಿದ್ದು, ಬಳ್ಳಿಗಾವಿಯ ಬಳಿಯಿರುವ ಉಡುತಡಿಯ ಶ್ರೀಮಂತ, ಕುಲೀನ ಮನೆತನದಲ್ಲಿ ಜನಿಸಿದರೂ, ಧಾರ್ಮಿಕ ಅನುಭಾವಿಕತೆಯತ್ತ ಸ್ಪಷ್ಟವಾದ ಒಲವನ್ನು ತೋರಿದಳು. ಬಳ್ಳಿಗಾವಿ ರಾಜ್ಯದ ರಾಜಕುಮಾರನಾದ ಕೌಶಿಕನು ಆಕೆಯಲ್ಲಿ ಅನುರಕ್ತನಾಗಿ, ಆಕೆಯ ಇಚ್ಛೆಗೆ ವಿರೋಧವಾಗಿ ಆಕೆಯನ್ನು ಮದುವೆಯಾದನು. ಮದುವೆಯ ಶಪಥವನ್ನು ಕೌಶಿಕನು ಮುರಿದಾಗ, ಆಕೆಯು ಅತ್ಯಂತ ಸಣ್ಣ ಪ್ರಾಯದಲ್ಲೇ ಜಗತ್ತನ್ನು ಪರಿತ್ಯಜಿಸಿ, ದೈವ ಪ್ರೇಮದಿಂದ ಉನ್ಮತ್ತಳಾಗಿ ಎಲ್ಲೆಡೆ ಸಂಚರಿಸುವ ಮೂಲಕ ಚರಸಂತೆಯಾದಳು. ಆಕೆಯು, "ಹಸಿವೆಯಾದರೆ ನಾನು ಭಿಕ್ಷೆ ಬೇಡಬಹುದು, ತೃಷೆಯಾದರೆ ಬಾವಿ–ಕೆರೆಗಳಿಂದ ನೀರನ್ನು ಕುಡಿಯಬಹುದು, ಪಾಳುಬಿದ್ದ ದೇವಾಲಯಗಳಲ್ಲಿ ಮಲಗಬಹುದು, ಆದರೆ ಆತ್ಮ ಸಂಗಾತಕ್ಕಾಗಿ ನೀವು ನನಗೆ ಮಾತ್ರ ಸೇರಿದವರು," ಎಂದು ನುಡಿದಿದ್ದಾಳೆ. ಅಲ್ಲಮ ಪ್ರಭುವಿನಂತೆ, ಆಕೆಯೂ ಬಸವೇಶ್ವರನಿದ್ದ ಕಲ್ಯಾಣಕ್ಕೆ ಭೇಟಿ ನೀಡಿ, ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಅನುಭಾವಿ ಚಿಂತನೆ ಹಾಗೂ ಚರ್ಚೆಗಳಲ್ಲಿ ಪಾಲ್ಗೊಂಡಳು. ಕಲ್ಯಾಣದಲ್ಲಿ ಕೆಲವು ವರ್ಷಗಳು ತಂಗಿದ ನಂತರ, ಬಸವೇಶ್ವರ, ಅಲ್ಲಮ ಹಾಗೂ ಇತರ ಸಂತರ ಸಾಂಗತ್ಯದಲ್ಲಿ ಜ್ಞಾನ ಸಾಕ್ಷಾತ್ಕಾರವನ್ನು ಹೊಂದಿದ ಆಕೆಯು ಶ್ರೀಶೈಲ ಪರ್ವತಕ್ಕೆ ತೆರಳಿ, ಚನ್ನ ಮಲ್ಲಿಕಾರ್ಜುನನನ್ನು ಧ್ಯಾನಿಸಿ, ಭಾವಪರವಶಳಾಗಿ ಸಮಾಧಿಯಲ್ಲಿ ಆತನಲ್ಲಿ ಒಂದಾದಳು.

ಅಕ್ಕನು ಮಲ್ಲಿಕಾರ್ಜುನನಲ್ಲಿ ಅನುರಕ್ತಳಾಗಿ, ಆತನನ್ನು ತನ್ನ ಸ್ವಾಮಿಯೆಂದು ಅಂಗೀಕರಿಸಿ, "ನಾನು ನಿನ್ನನ್ನು ಪ್ರೇಮಿಸುತ್ತೇನೆ ಹಾಗೂ ನನ್ನನ್ನೇ ನಿನಗೆ ಅರ್ಪಿಸುತ್ತೇನೆ. ನೀನು ಒಡ್ಡಿದ ಮಾಯೆಯನ್ನು, ನಿನ್ನ ಅಪರಿಮಿತ ದಯೆ, ಕರುಣೆ ಇಲ್ಲದೆ, ಗೆದ್ದು, ನಿನ್ನನ್ನು ಹೇಗೆ ತಲುಪಲಿ? ನಾನು ಹುಡುಗಿಯಾಗಿದ್ದಾಗಿನಿಂದಲೂ ನಿನ್ನಲ್ಲಿ ಅನುರಕ್ತಳಾಗಿರುವ ಪ್ರೇಮದಲ್ಲಿ ನನ್ನನ್ನು ನಾನು ನಿನಗೆ ಅರ್ಪಣೆ ಮಾಡಿಕೊಂಡಿರುವೆ. ಸುಖವಾಗಲಿ, ದುಃಖವಾಗಲಿ, ನೀನೇ ನನ್ನ ದಾರಿ ದೀವಿಗೆ," ಎಂದು ಹೇಳಿದಳು.



ಜಗಜ್ಯೋತಿ ಬಸವೇಶ್ವರ

ಅನೇಕ ಮಹಾನ್ ಸಂತರು ಅಕ್ಕನಂತೆಯೇ ನಡೆದಿದ್ದು ಭಾರತೀಯ ಧಾರ್ಮಿಕ ಇತಿಹಾಸದಲ್ಲಿ, ಮಾನವ ಬಾಂಧವ್ಯಕ್ಕೆ ಅವರು ತೋರಿದ ಶ್ರದ್ಧೆ ಹಾಗೂ ಸೇವೆಗಳು ಅಭೂತಪೂರ್ವವಾದುದು. ಅವರ ಪದಗಳನ್ನು ನೆನಪಿಸಿಕೊಂಡು, ಪುನರಾವರ್ತಿಸಲಾಗುತ್ತಿದ್ದು. ಅವರ ಭಕ್ತಿಯ ಗೀತೆಗಳು ಮಾನವ ಹೃದಯದ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿವೆ. ಭಕ್ತಿಯ ಧಾರ್ಮಿಕ ಚಳವಳಿಯ ಫಲವಾಗಿ, ವಚನಕಾರರ ಶ್ರದ್ಧಾಪೂರ್ಣ ಭಕ್ತಿಯ ಉಕ್ತಿಗಳು ಸಾಮಾನ್ಯ ಜನರ ಆಡು ಭಾಷೆಯಲ್ಲಿ ರಚಿಸಲ್ಪಟ್ಟವು. ಅಭಿವ್ಯಕ್ತತೆಯ ಮಾಧ್ಯಮವು ಕನ್ನಡವಾಗಿದ್ದು, ಕೆಲವೊಮ್ಮೆ ಕೇವಲ ಎರಡು ಅಥವಾ ಮೂರು ಸಾಲುಗಳ ಚಿಕ್ಕದಾದ ಗೀತಪ್ರಧಾನವಾದ ವಚನಗಳು, ಒಂದು

ಪ್ರಾರ್ಥನೆ ಅಥವಾ ಗಾಢವಾದ ಭಕ್ತಿಯ ಆಶಯದ ಮೂಲಕ ಆತ್ಮದ ಇಂಗಿತವು ಅಭಿವ್ಯಕ್ತವಾಯಿತು.

## ಹರಿದಾಸ ಚಳವಳಿ

ಹರಿದಾಸ ಚಳವಳಿಯೂ, ಅದಕ್ಕೆ ಮುನ್ನ ಬಂದ ವೀರಶೈವ ಚಳವಳಿಯಂತೆ, ಸಾಧಾರಣ ಪರಿಸ್ಥಿತಿಗಳಲ್ಲಿ ಹುಟ್ಟಿದ, ಎಲ್ಲ ಜಾತಿ ಹಾಗೂ ಮತಗಳಿಗೆ ಸೇರಿದ ಅಪ್ಪಟ ಹಾಗೂ ಶ್ರದ್ಧಾಭಕ್ತಿಯ ಪ್ರತಿನಿಧಿಗಳ ತೇಜೋಗುಣವನ್ನೇ ಪ್ರಸ್ತುತಪಡಿಸಿತು. ಅವರೆಲ್ಲರೂ ಭಕ್ತಿಯ ಸಲುವಾಗಿ ಹೋರಾಡಿ, ಬಲದಿಂದ ಅಲ್ಲದೆ, ವಿನಮ್ರತೆಯಿಂದ ಅದನ್ನು ಜಯಿಸಿದರು. ಎಲ್ಲ ವರ್ಗಗಳಲ್ಲೂ ಹಾಗೂ ಎಲ್ಲ ಮನಸ್ಸುಗಳನ್ನೂ, ವಿವಿಧ ಸಮುದಾಯಗಳ ಪುರುಷ–ಮಹಿಳೆಯರನ್ನು ತಲುಪಿರುವ ದೆಸೆಯಿಂದ, ಚಳವಳಿಯ ಪ್ರಾಮಾಣಿಕವಾದ ನೈಜ ಗುಣಲಕ್ಷಣಗಳು ಪ್ರಕಟವಾಯಿತು. ಹರಿದಾಸ ಅನುಭವವು ಹಲವಾರು ರೀತಿಯಲ್ಲಿ ವ್ಯಕ್ತವಾಗಿದೆ – ಸ್ವಾನುಭವ, ಅನುಭೂತಿ, ಆತ್ಮಾನುಭವ, ಬ್ರಹ್ಮಜ್ಞಾನ, ಬ್ರಹ್ಮಸಾಕ್ಷಾತ್ಕಾರ, ಅಪರೋಕ್ಷಜ್ಞಾನ, ಇತ್ಯಾದಿ. ವಚನಕಾರರು ಅತೀಂದ್ರಿಯವಾದ ಅನುಭವವನ್ನು ಅನುಭಾವ ಎಂದು ಕರೆದರೆ, ಹರಿದಾಸರು ಅದನ್ನು ಅಪರೋಕ್ಷಜ್ಞಾನ ಎಂದರು. ಸಕಲ ರೂಪದಲ್ಲಿ ಎಲ್ಲೆಡೆಯೂ ಇರುವ ಸರ್ವಜ್ಞನೂ ಸರ್ವಶಕ್ತನೂ ಆದ ದೇವನು ಒಬ್ಬನೇ. ಈ ಸರ್ವನಲ್ಲಿ ವಿಲೀನವಾಗುವುದು ಆಧ್ಯಾತ್ಮಿಕದ ಅಂತಿಮ ಗುರಿಯಾಗಿದ್ದು ಭಕ್ತನು ಶ್ರದ್ಧೆ, ಭಕ್ತಿ ಹಾಗೂ ಚಿಂತನೆಯ ಮೂಲಕ ಪರಮಾನಂದವನ್ನು ಹೊಂದುತ್ತಾನೆ. ಹರಿದಾಸರ ದೀಕ್ಷೆಯಲ್ಲಿ, ಶೃತಿ, ಸ್ಮೃತಿ ಹಾಗೂ ಪುರಾಣಗಳಲ್ಲಿನ ಶ್ರದ್ಧೆ, ಸಾಲ ಹಾಗೂ ಅನಗತ್ಯತೆಯ ವಿರುದ್ಧದ ಪ್ರತಿಜ್ಞೆ, ತೃಪ್ತಿ ಹಾಗೂ ಹರಿಗೆ ಮೀಸಲಿಟ್ಟ ದಿನಗಳಲ್ಲಿ, ಆತನನ್ನು ನಿಯಮಿತವಾಗಿ ಹಾಗೂ ಪ್ರತ್ಯೇಕವಾಗಿ ಪೂಜಿಸುವುದು, ಆತ್ಮಶುದ್ಧಿ ಹಾಗೂ ಹರಿಯ ಮೂಲಕ ಮನುಕುಲಕ್ಕೆ ಸೇವೆ ಸಲ್ಲಿಸುವ ಅರ್ಪಣಾ ಮನೋಭಾವವು ಒಳಗೊಂಡಿದ್ದವು. ಹರಿಯ ಅವಿರತ ಧ್ಯಾನವನ್ನು ನಿರ್ವಹಿಸುವ ಕಠಿಣವಾದ ಕಾರ್ಯವನ್ನು ಇದು ಒಳಗೊಂಡಿರುವುದರಿಂದ, ಆತ್ಮವು ಒಳಪಡುವ ಕಷ್ಟ–ಕಾರ್ಪಣ್ಯಗಳಿಂದ ಕೂಡಿದ ಪಯಣವೆಂದು ಪುರಂದರ ಹಾಗೂ ವಿಜಯದಾಸರು ಪರಿಗಣಿಸಿದ್ದರು. ಏಕೆಂದರೆ, ಹರಿಯ ಧ್ಯಾನದಲ್ಲಿ ಅನವರತ ಚಿತ್ತೈಕಾಗ್ರತೆಯನ್ನು ನಿರ್ವಹಿಸುವ ಕಠಿಣ ಕಾರ್ಯದಿಂದ ಅದು ಕೂಡಿರುವುದಾಗಿತ್ತು.

ವೇದಗಳಲ್ಲಿ ಪಾರಂಗತರಾದ ವ್ಯಾಸಕೂಟರಿಗೂ, ಹರಿಯ ಅವತಾರಗಳ ಅಂತಃಪ್ರಜ್ಞೆಯ ಮುನ್ನರಿವನ್ನು ಹೊಂದಿದ ದಾರ್ಶನಿಕರಿಗೂ, ಹಾಗೂ ಕನ್ನಡ ಭಾಷೆಯ ಮೂಲಕ ಮಧ್ವರ ಸಂದೇಶವನ್ನು ಸಾಮಾನ್ಯ ತಲುಪಿಸಿದ ದಾಸಕೂಟಕ್ಕೂ ಇರುವ ವ್ಯತ್ಯಾಸವು ಸ್ಪಷ್ಟವಾಗಿ ಪ್ರಕಟವಾಯಿತು.

*ಶ್ರೀಮಂಜುನಾಥ ದೇವಸ್ಥಾನ, ಧರ್ಮಸ್ಥಳ, ದಕ್ಷಿಣಕನ್ನಡ ಜಿಲ್ಲೆ*



ಕೀರ್ತನೆಗಳ ರೂಪದಲ್ಲಿ ಬೃಹತ್ ಪ್ರಮಾಣದ ಸಾಹಿತ್ಯವನ್ನು ಈ ಸಂತರು ಕಟ್ಟಿದರು. ಇವು ಆಧುನಿಕ ಕನ್ನಡ ಗದ್ಯ ಹಾಗೂ ಕಾವ್ಯದ ಮಾದರಿಗಳಾದವು. ಜನರನ್ನು ರಂಜಿಸುವ ಕೀರ್ತನೆಗಳನ್ನು ಹಾಡುತ್ತಾ, ತಂಬೂರಿಯನ್ನು ಹಿಡಿದು ಕಾಲ್ನಡಿಗೆಯಲ್ಲಿ ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತ, ಕಷ್ಟ–ಕಾರ್ಪಣ್ಯ ಹಾಗೂ ಬಡತನವನ್ನು ತಿರಸ್ಕರಿಸಿ, ಸತ್ಯ, ಸದ್ಗುಣ ಹಾಗೂ ದೈವಭಕ್ತಿಗಳನ್ನು ರೂಢಿಸಿಕೊಂಡ ಜೀವನವನ್ನು ಜನರು ನಡೆಸುವಂತೆ ಆಗ್ರಹಿಸುತ್ತ ಸಂಚರಿಸುವುದು ಈ ಸಂತರ ಸಂಪ್ರದಾಯವಾಯಿತು. ಅದೇ ವೇಳೆಗೆ, ಮಾನವ ಹೃದಯಕ್ಕೆ ನಾಟುವ ರೀತಿಯಲ್ಲಿ ಉಪನಿಷತ್ತುಗಳ ಕಠಿಣ ಚಿಂತನೆಗಳನ್ನು ಸರಳ, ಸುಶ್ರಾವ್ಯ, ರಾಗಯುಕ್ತ ಪದ್ಯದ ರೂಪದಲ್ಲಿ ಅವರು ತಿಳಿಸಿದರು. ಆತ್ಮ–ಸಾಕ್ಷಾತ್ಕಾರದ ಸಾಧನೆಗೆ ಸಂಗೀತದ ದೈವತ್ವದಲ್ಲಿ ನಂಬಿಕೆ ಹೊಂದಿದ ಮಹಾರಾಷ್ಟ್ರದ ಸಂತರಂತೆ ಹರಿದಾಸರೂ ಕೂಡ, ತಮ್ಮ ಸ್ವಂತ ಕೀರ್ತನೆ ಹಾಗೂ ಸಂಗೀತವನ್ನು ಅವಳಿಗಳೆಂದು ಪರಿಗಣಿಸಿದರು. ತತ್ಪರಿಣಾಮವಾಗಿ, ದೇವರ ಪ್ರೀತಿಗೆ ತಮ್ಮನ್ನು ತಾವು ಅರ್ಹರಾಗಿಸಿಕೊಳ್ಳಲು, ಎಲ್ಲಾ ಹರಿದಾಸರೂ ರಾಗ, ತಾಳ ಹಾಗೂ ಶೃತಿಗಳಲ್ಲಿ ನಿಷ್ಣಾತರಾಗಿದ್ದರು. ಬಹುಮಟ್ಟಿಗೆ, ಹರಿದಾಸರು ಮಧ್ವರ ವೈಷ್ಣವ ಪಂಥಕ್ಕೆ ಸೇರಿದವರಾಗಿದ್ದಾರೆ.

ಹರಿದಾಸ ಸಾಹಿತ್ಯದ ಅತ್ಯುತ್ತಮ ಕೃತಿಗಳನ್ನು ೧೫ನೆಯ ಶತಮಾನದ ನಂತರ ರಚಿಸಲಾಯಿತು. ಶ್ರೀ ವ್ಯಾಸರಾಜ (ಕ್ರಿ.ಶ. ೧೪೭೭–೧೫೩೯), ಶ್ರೀ ವಾದಿರಾಜ (ಕ್ರಿ.ಶ. ೧೪೮೦–೧೬೦೦), ಶ್ರೀ


ಉಡುಪಿಯ ಶ್ರೀಕೃಷ್ಣ ದೇವಾಲಯ ಸಂಕೀರ್ಣ

ಪುರಂದರದಾಸ (ಕ್ರಿ.ಶ. ೧೪೮೪–೧೫೬೪), ಶ್ರೀ ಕನಕದಾಸ (ಕ್ರಿ.ಶ. ೧೫೦೯–೧೬೦೭), ಶ್ರೀ ವಿಜಯದಾಸ (ಕ್ರಿ.ಶ. ೧೬೮೭–೧೭೭೫), ಶ್ರೀ ಗೋಪಾಲದಾಸ (ಕ್ರಿ.ಶ. ೧೭೨೧–೧೭೬೨) ಹಾಗೂ ಶ್ರೀ ಜಗನ್ನಾಥದಾಸರು (ಕ್ರಿ.ಶ. ೧೭೨೮–೧೮೦೯) ಹರಿದಾಸ ಚಳವಳಿಯ ಮಹಾನ್ ಸಂತರಲ್ಲಿ ಪ್ರಮುಖರಾಗಿದ್ದಾರೆ.

ಮಧ್ವ ಸಂತರ ಪೈಕಿ ಅತ್ಯಂತ ಮಹಾನ್ ಯತಿಗಳಾ ಶ್ರೀ ವ್ಯಾಸರಾಜರು, ವಿಜಯನಗರ ಸಾಮ್ರಾಜ್ಯದ ನರಸರಾಜ, ವೀರ ನರಸಿಂಹ, ಕೃಷ್ಣದೇವರಾಯ, ತಿರುಮಲರಾಯ ಹಾಗೂ ಅಚ್ಯುತರಾಯರಿಗೆ ಶಿಕ್ಷಕರು ಹಾಗೂ ಗುರುಗಳಾಗಿದ್ದರು. ಮಧ್ವ ಸಿದ್ಧಾಂತದ ಸಂಸ್ಥಾಪಕರ ನಂತರ, ಅದರ ಅತ್ಯಂತ ಮಹಾನ್ ಪ್ರತಿಪಾದಕರಲ್ಲಿ ಇವರು ಒಬ್ಬರಾಗಿದ್ದು ವಾಗ್ವಾದಗಳಲ್ಲಿ ಪಾಷಾಂಡಿಗಳನ್ನು ಅವರು ಗೆದ್ದರೆಂದು ನಂಬಲಾಗಿದೆ. ಇಂದಿಗೂ ವ್ಯಾಸತ್ರಯವೆಂದು ಪ್ರಸಿದ್ಧವಾದ ತರ್ಕ–ತಾಂಡವ, ನ್ಯಾಯಾಮೃತ ಹಾಗೂ ತಾತ್ಪರ್ಯ ಚಂದ್ರಿಕ ಎಂಬ ಮೂರು ಸಂಸ್ಕೃತ ಕೃತಿಗಳಿಗೆ ಲೇಖಕರಾಗಿದ್ದಾರೆ. ನಂತರದ ವಿಜಯನಗರ ಅರಸರು ಆಳಿದ ಪೆನುಗೊಂಡದ ಸಂಸ್ಕೃತ ವಿಶ್ವವಿದ್ಯಾನಿಯಲಯಕ್ಕೆ ಇವರು ಕೆಲಕಾಲ ಕುಲಪತಿಗಳಾಗಿದ್ದರು. ಶ್ರೀ ಪುರಂದರದಾಸರು ವ್ಯಾಸರಾಜರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದು ಗುರು–ಶಿಷ್ಯರಿಬ್ಬರ ಕೃತಿಗಳು ಹಾಗೂ ಕೀರ್ತನೆಗಳು, ಸರಳ ಹಾಗೂ ಸುಲಭವಾಗಿ ಅರ್ಥವಾಗುವ ಸುಶ್ರಾವ್ಯ ಕನ್ನಡ ಪದ್ಯಗಳ ಮೂಲಕ ಆರ್ಯ, ವೇದ ಹಾಗೂ ಉಪನಿಷತ್ತುಗಳ ಚಿಂತನೆಗಳನ್ನು ತಿಳಿಸಿದುದಕ್ಕಾಗಿ ಕರ್ನಾಟಕದಾದ್ಯಂತ ಜನಪ್ರಿಯವಾಗಿವೆ. ಶ್ರೀ ವ್ಯಾಸರಾಜ ಹಾಗೂ ಪುರಂದರರು ಚೈತನ್ಯ, ಕಬೀರ್, ತುಳಸೀದಾಸ, ವಲ್ಲಭಾಚಾರ್ಯ ಹಾಗೂ ಏಕನಾಥರ ಸಮಕಾಲೀನರಾಗಿದ್ದು ಅವರಂತೆಯೇ, ಸಾಮಾನ್ಯ ಜನರಲ್ಲಿ ಭಕ್ತಿ ತತ್ವಚಿಂತನೆಯನ್ನು ಪ್ರಚಾರ ಮಾಡಿದರು. ಶ್ರೀ ವಾದಿರಾಜರು ಕುಂಭಾಸಿಯ (ದಕ್ಷಿಣ ಕನ್ನಡ ಜಿಲ್ಲೆ) ಹೂವಿನಕೆರೆಗೆ ಸೇರಿದ್ದು ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿಯ ದೇವಾಲಯದ ಸಂಸ್ಥಾಪಕರೆಂದು ಹಾಗೂ ಉಡುಪಿಯಲ್ಲಿ ಅಷ್ಟ ಮಠಾಧಿಪತಿಗಳ ಅಡಿಯಲ್ಲಿ ಪೂಜಾ ವಿಧಾನದ ಪುನರ್‌ವ್ಯವಸ್ಥೆಯನ್ನು ಮಾಡಿದರೆಂದು ಅರಸಪ್ಪ ನಾಯಕನ ಅವಧಿಯಲ್ಲಿ, ಶಿರಸಿಯ ಪುನರ್‌ರಚನೆಯಲ್ಲಿ ನಿಜಕ್ಕೂ ನೆರವಾದರೆಂದು ನಂಬಲಾಗಿದೆ.

ಕರ್ನಾಟಕದಲ್ಲೆಲ್ಲ ಪುರಂದರದಾಸರು ಅತ್ಯಂತ ಜನಪ್ರಿಯರಾದ ಹರಿದಾಸರು. ಅವರ ಅಸಂಖ್ಯಾತ ಕೃತಿಗಳನ್ನು ಪ್ರತಿಯೊಬ್ಬ ಕುಟುಂಬಸ್ಥ, ಪುರುಷ, ಸ್ತ್ರೀ ಹಾಗೂ ಮಕ್ಕಳು ನಿರ್ಮಲ ಮನಸ್ಸಿನಿಂದ ಆನಂದ ಪರವಶರಾಗಿ, ಹಾಡುತ್ತಾರೆ. ಪುರಂದರಗಢದಲ್ಲಿ ಜನಿಸಿದರೂ, ಸಣ್ಣ ಪ್ರಾಯದಲ್ಲೇ ಸಂಪತ್ತನ್ನೆಲ್ಲಾ ತೊರೆದು, ಪುರಂದರ ವಿಠ್ಠಲನೆಂಬ ನಾಮಾಂಕಿತದಲ್ಲಿ, ಹಂಪಿಯ ವಿಜಯನಗರದ ಅರಸರ ಆಶ್ರಯವ ಬಯಸಿದರು. ಅವರ ರಚನೆಗಳನ್ನು ಪುರಂದರ ಉಪನಿಷತ್ತುಗಳೆಂದು ಜನಪ್ರಿಯವಾಗಿ ಕರೆಯಲಾಗುತ್ತದೆ. ಅದರ ಭಾಷೆಯು ಕಾವ್ಯಮಯವಾಗಿದ್ದು, ಸಾಮಾನ್ಯ ಜೀವನಾನುಭವದಿಂದ ಕಲ್ಪನಾ ಶ್ರೀಮಂತಿಕೆಯಿಂದ ಕೂಡಿದ ರೂಪಕೋಕ್ತಿ ಹಾಗೂ ಸಾಮ್ಯಗಳನ್ನು ಹೊಂದಿದೆ. ಕರ್ನಾಟಕದ ಮತ್ತೊಬ್ಬ ಮಹಾನ್ ಸಂತರಾದ ಶ್ರೀ ಕನಕದಾಸರು, ಹಾವೇರಿ ಜಿಲ್ಲೆಯ, ಹಾನಗಲ್ ತಾಲ್ಲೂಕಿನ ಬಾಡಗ್ರಾಮದವರು. ಸಮಕಾಲೀನರಾದ ಪುರಂದರದಾಸರಂತೆ, ವೆಂಕಟಪತಿಯ ಆರಾಧನೆ ಮಾಡಲು ಲೌಕಿಕ ವಾಂಚಲ್ಯಗಳನ್ನು ಪರಿತ್ಯಾಗ ಮಾಡಿ, ಪ್ರೇಮ ಸಿದ್ಧಾಂತದ ಬೋಧನೆಯನ್ನು ಮಾಡಿದರು. ಇವರ ಕೃತಿಗಳಾದ ಹರಿ ಭಕ್ತಿಸಾರ, ಮೋಹನ ತರಂಗಿಣಿ, ನಳಚರಿತ್ರೆ ಹಾಗೂ ರಾಮಧ್ಯಾನ ಚರಿತ್ರೆಗಳು ಕರ್ನಾಟಕದಲ್ಲಿ ಧರ್ಮ ಹಾಗೂ ಹರಿದಾಸ ಚಿಂತನೆ ಮತ್ತು ಸಿದ್ಧಾಂತಗಳ ಮೇಲೆ ಗಣನೀಯವಾದ ಪರಿಣಾಮವನ್ನು ಬೀರಿವೆ.


ಕನಕದಾಸರ ಪುತ್ಥಳಿ, ಬಾಡ, ಹಾವೇರಿ ಜಿಲ್ಲೆ,



ಜುಮ್ಮಾ ಮಸೀದಿ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ

## ಇಸ್ಲಾಂ ಧರ್ಮ

ಕರ್ನಾಟಕದಲ್ಲಿ ಮೊದಲ ಬಾರಿಗೆ ಇಸ್ಲಾಂ ಧರ್ಮವನ್ನು ೧೪ನೆಯ ಶತಮಾನದಲ್ಲಿ ಪರಿಚಯಿಸಲಾಯಿತು. ಆನಂತರದಲ್ಲಿ ಬಿಜಾಪುರ ಹಾಗೂ ಸಿರಾದಂತಹ ಪ್ರಾಂತ್ಯಗಳಲ್ಲಿ ಬಲಿಷ್ಠವಾದ ಮುಸಲ್ಮಾನ ರಾಜ್ಯಗಳು ಸ್ಥಾಪನೆಗೊಂಡವು. ತನ್ಮೂಲಕ ಈ ನೆಲದ ಮೇಲೆ ಮುಸಲ್ಮಾನ ಜನರು ಸ್ಥಿರವಾಗಿ ನೆಲೆಸುವಂತಾಯಿತು. ದಕ್ಷಿಣ ಭಾರತದ ಪ್ರಾಂತಗಳ ಪೈಕಿ, ಇಸ್ಲಾಂ ಧರ್ಮ ಹಾಗೂ ಸಂಸ್ಕೃತಿಯು ನೆಲೆಯೂರಿ, ಅಭಿವೃದ್ಧಿ ಹೊಂದಿದ್ದು ಕರ್ನಾಟಕದಲ್ಲಿ ಮಾತ್ರವೇ. ಬಹಮನಿ ರಾಜ್ಯವು ಉತ್ತುಂಗದಲ್ಲಿದ್ದಾಗ, ಸುಂದರ ಮಸೀದಿಗಳ ನಿರ್ಮಾಣ, ಶಾಲೆಗಳ ನಿರ್ವಹಣೆ ಹಾಗೂ ವಿದ್ವಾಂಸರು ಹಾಗೂ ಚಿತ್ರರಚನಕಾರರಿಗೆ ಉತ್ತೇಜನವನ್ನು ನೀಡುವಲ್ಲಿ, ಹೆಸರುವಾಸಿಯಾದ ಇಸ್ಲಾಮಿಕ್ ಅರಸರ ಉದಾಹರಣೆಯನ್ನು ಅನುಕರಣೆ ಮಾಡುವ ಪ್ರಯತ್ನವನ್ನು ಶಿಯಾ ನವಾಬರು ಮಾಡಿದರು. ಈ ವಾಸ್ತವವನ್ನು ಗೋಲ್ಕೊಂಡ ಹಾಗೂ ಬಿಜಾಪುರದ ಸ್ಮಾರಕಗಳು ಸಾರುತ್ತವೆ. ವಿಜಯನಗರದ ರಾಜರಿಂದ ಬಿಜಾಪುರದ ಪಡೆಗಳು ರಾಯಚೂರಿನ ಯುದ್ಧದಲ್ಲಿ (ಕ್ರಿ.ಶ.೧೫೨೦) ಸೋಲನ್ನು ಅನುಭವಿಸಿದ ನಂತರ, ಹಿಂದೂ–ಮುಸಲ್ಮಾನ ಐಕಮತ್ಯದ ಯೋಜಿತ ಯತ್ನವನ್ನು ಕೈಗೊಳ್ಳಲಾಯಿತು.

ಹೈದರ್ ಹಾಗೂ ಟಿಪ್ಪು ಆಳ್ವಿಕೆಯಡಿ ಇಸ್ಲಾಂ ಧರ್ಮಕ್ಕೆ ರಾಜಾಶ್ರಯ ದೊರೆಯಿತು. ಆದರೆ ಟಿಪ್ಪುವು ಧರ್ಮಾಂಧನೆಂಬ ಸಾಮಾನ್ಯ ನಂಬಿಕೆಗೆ ವಿರುದ್ಧವಾಗಿ, ಇತರ ಮತಗಳಿಗೆ ಗೌರವವನ್ನು ತೋರುವುದು ಹೇಗೆಂದು ಆತನಿಗೆ ತಿಳಿದಿತ್ತು. ದೇಶವನ್ನು ಹಾದು ಹೋಗುತ್ತಿದ್ದ ಮರಾಠ ಪಡೆಯಿಂದ ಶೃಂಗೇರಿ ಮಠಕ್ಕೆ ತೊಂದರೆಯಾದಾಗ, ಅದರ ಮುಖ್ಯಸ್ಥರಿಗೆ ಪೂಜ್ಯಭಾವನೆಯನ್ನು ತೋರಿಸಿದನು. ಟಿಪ್ಪು ಒಬ್ಬ ಕಡುಶ್ರದ್ಧೆ ಹೊಂದಿದ ಸುನ್ನಿಯಾದರೂ, ಇತರ ಮತಗಳ ಧಾರ್ಮಿಕ ಸಂವೇದನೆಗಳಿಗೆ ಗೌರವವನ್ನು ಸಲ್ಲಿಸಿದನು. ಕರ್ನಾಟಕದಲ್ಲಿ ಮುಸಲ್ಮಾನ ಆಳ್ವಿಕೆಯು ಅಲ್ಪಕಾಲ ಮಾತ್ರ ಇದ್ದರೂ, ಸುಂದರ ಕಟ್ಟಡ ನಿರ್ಮಾಣ ಶೈಲಿಯ ಸ್ಮಾರಕಗಳನ್ನೂ, ಉರ್ದು ಭಾಷೆಯನ್ನೂ ದೈನಂದಿನ ಭಾಷೆಯ ಶಬ್ದ ಭಂಡಾರಕ್ಕೆ, ಅದರಲ್ಲೂ ಮೈಸೂರಿನ ಭಾಷೆಗೆ, ಹಲವಾರು ಉರ್ದು ಪದಗಳನ್ನು ಕೊಡುಗೆಯಾಗಿ ನೀಡಿದೆ.

## ಕ್ರೈಸ್ತಮತ

ಭಾರತದಲ್ಲಿ ಮಲಬಾರ್ ಕರಾವಳಿ ಹಾಗೂ ಇಂದಿನ ಚೆನ್ನೈನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕ್ರೈಸ್ತ ಧರ್ಮವನ್ನು ಬಹಳ ಹಿಂದೆಯೇ ಪರಿಚಯ ಮಾಡಲಾಯಿತು. ಕರ್ನಾಟಕದಲ್ಲಿ ಉಡುಪಿಯ ಕಲ್ಯಾಣಪುರದಲ್ಲಿ ಮೊದಮೊದಲ ವಸಾಹತು ಸ್ಥಾಪಿತವಾಯಿತೆಂದು ತೋರುತ್ತದೆ. ಕ್ರಿ.ಶ.ಆರನೆಯ ಶತಮಾನದಲ್ಲಿ, ಪಶ್ಚಿಮ ಕರಾವಳಿ ಹಾಗೂ ಚೆನ್ನೈನಲ್ಲಿ ಪ್ರಚಲಿತವಿದ್ದ ಕ್ರಿಶ್ಚಿಯನ್ ಬೋಧನೆಯಿಂದ ವೇದಾಂತದ ಸುಧಾರಕರನ ಮೇಲೆ ಕ್ರಿಶ್ಚಿಯನ್ ಬಿಷಪ್ ಒಬ್ಬರು ಬಹಳಷ್ಟು ಪ್ರಭಾವ ಹಾಗೂ ಪ್ರೇರಣೆಯನ್ನು ಬೀರಿದರು. ನಂತರದ ಕಾಲದಲ್ಲಿ, ಭಾರತಕ್ಕೆ ಪೋರ್ಚುಗೀಸ್ ಜನರು ಬಂದಾಗ, ಬಿಜಾಪುರ ರಾಜ್ಯವು ಅವರಿಗೆ ಆಶ್ರಯ ನೀಡಿದರೆ, ವಿಜಯನಗರದ ಅರಸರು ಪೋಷಣೆಯನ್ನು ಮುಂದುವರೆಸಿದರು. ಇದರ ಫಲವಾಗಿ, ಭಾರತದಲ್ಲಿ ರೋಮನ್ ಕ್ಯಾಥೋಲಿಕ್‌ನ ಅತ್ಯಂತ ಪ್ರಭಾವಶಾಲಿ ಕೇಂದ್ರವಾಗಿ ಗೋವಾ ಪರಿವರ್ತಿತವಾಯಿತು. ಸೊಸೈಟಿ ಆಫ್ ಜೀಸಸ್‌ನ ಸಂಸ್ಥಾಪಕನಾದ ಇಗ್ನೇಷಿಯಸ್ ಲೊಯೊಲನ ಶಿಷ್ಯನಾದ ಫ್ರಾನ್ಸಿಸ್ ಜೇವಿಯರ್ ಹಾಗೂ ಜಾನ್ ಡಿ ಬ್ರಿಟ್ಟೋರವರು, ಕರ್ನಾಟಕದ ಪಶ್ಚಿಮ ಕರಾವಳಿಯನ್ನು ತಮ್ಮ ಕರ್ಮಭೂಮಿಯಾಗಿ ಮಾಡಿಕೊಂಡರು. ಕ್ರಿ.ಶ. ೧೭ನೆಯ ಶತಮಾನದ ಮಧ್ಯಭಾಗದಲ್ಲಿ ರೋಮನ್ ಕ್ಯಾಥೋಲಿಕ್‌ಗಳು ಮೈಸೂರಿಗೆ ಬಂದರು.

ಕೊಯಂಬತ್ತೂರು ಜಿಲ್ಲೆಯಲ್ಲಿ ಅವರು ಕ್ಯಾನರೀಸ್ ಮಿಷನ್ (ನಿಯೋಗ) ಒಂದನ್ನು ಸ್ಥಾಪಿಸಿದರು. ೧೯ನೆಯ ಶತಮಾನದ ಪ್ರಾರಂಭದಲ್ಲಿ, 'ಹಿಂದೂ ಆಚಾರ ಹಾಗೂ ಸಂಪ್ರದಾಯಗಳು – (ದಿ ಹಿಂದೂ ಮ್ಯಾನರ್ಸ್ ಆಂಡ್ ಕಸ್ಟಮ್ಸ್) ಎಂಬ ಕೃತಿಯ ಲೇಖಕನಾದ ಅಬ್ಬೆ ದುಬ್ವಾ ಎಂಬುವನು ಶ್ರೀರಂಗಪಟ್ಟಣದಲ್ಲಿ ಧರ್ಮಪ್ರಚಾರಕನಾಗಿ ನೆಲೆಸಿದನು. ಪ್ರಸ್ತುತ, ರೋಮನ್ ಕ್ಯಾಥೋಲಿಕ್‌ಗಳು ಅನೇಕ ಶಾಲೆ ಹಾಗೂ ಕಾಲೇಜುಗಳನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ.

ಲಂಡನ್ ಮಿಷನ್, ವೆಸ್ಲೆಯನ್ ಮಿಷನ್ ಹಾಗೂ ಬಾಸಲ್ ಮಿಷನ್‌ಗಳಂತೆ, ೧೯ನೆಯ ಶತಮಾನದ ಪ್ರಾರಂಭದಲ್ಲಿ ಕರ್ನಾಟಕದಲ್ಲಿ ಕಾರ್ಯಾರಂಭ ಮಾಡಿದ ಪ್ರಾಟೆಸ್ಟೆಂಟ್ ಮಿಷನ್‌ಗಳು ಕರ್ನಾಟಕಕ್ಕೆ ಸಲ್ಲಿಸಿದ ಸೇವೆ ಅಪಾರವಾದುದು. ಕನ್ನಡದ ಪ್ರಥಮ ಮುದ್ರಣ ಕಲ್ಲಚ್ಚುಗಳನ್ನು ಮಾಡಿದುದಕ್ಕಾಗಿ ಹಾಗೂ ಕನ್ನಡ ನಿಘಂಟುಗಳು, ಸಂಕಲನಗಳು ಹಾಗೂ ಶ್ರೇಷ್ಠ ಸಾಹಿತ್ಯಕ ಕೃತಿಗಳನ್ನು ಮುದ್ರಿಸುವ ಪ್ರಾರಂಭಿಕ ಯತ್ನಗಳಿಗಾಗಿ ಕರ್ನಾಟಕದ ಜನರು ಅವರಿಗೆ ಚಿರಋಣಿಗಳಾಗಿರಬೇಕು. ಅಲ್ಲದೆ ಮಿಷನ್‌ಗಳು ಹಲವಾರು ಶೈಕ್ಷಣಿಕ ಸಂಸ್ಥೆ ಹಾಗೂ ಆಸ್ಪತ್ರೆಗಳನ್ನು ತೆರೆದವು.


ಕ್ರಿಶ್ಚಿಯನ್ ಚರ್ಚುಗಳ ಕಾಲೇಜು

ಕ್ರಿಶ್ಚಿಯನ್ ಮಿಷನ್‌ಗಳ ದಾನಶೀಲ ಚಟುವಟಿಕೆಗಳ ಜೊತೆಜೊತೆಗೇ, ಮತ ಪರಿವರ್ತತಾ ಕಾರ್ಯವನ್ನೂ ಹಿಂದೂ ಸಮಾಜದ ಕೆಳವರ್ಗಗಳಲ್ಲಿ ಮಾಡುವುದನ್ನು ಅವರು ಮುಂದುವರಿಸಿದರು. ಧರ್ಮಪ್ರಚಾರಕರ ಕಟ್ಟಾಸಕ್ತಿ ಹಾಗೂ ಮತಪರಿವರ್ತನೆಯ ಸದ್ದಿಲ್ಲದ ಕಾರ್ಯವನ್ನು ಆಸ್ಪತ್ರೆ ಹಾಗೂ ಶೈಕ್ಷಣಿಕ ಸಂಸ್ಥೆಗಳ ಮೂಲಕ ಮಾಡಿ, ಹಿಂದುತ್ವದ ವೈವಿಧ್ಯಮಯ ಸಮುದಾಯಗಳನ್ನು ಅವರು ಏಕೀಕರಿಸಿದರು.

ಎಲ್ಲಾ ಕಾಲದಲ್ಲೂ, ಸಹಿಷ್ಣುತೆಯ ಭಾವವು ಸ್ಥಿರವಾಗಿ ಹಾಗೂ ನಿರಂತರವಾಗಿ ಮುಂದುವರಿಯಿತು. ಕರ್ನಾಟಕದಲ್ಲಿ ಜೈನ ಧರ್ಮವು ಅಭ್ಯುದಯವಾದಾಗ, ಜೈನ ಗುರುಗಳಿಗೂ ವೇದ ಧರ್ಮದ ಗುರುಗಳಿಗೆ ತೋರುವ ಗೌರವವನ್ನೇ ನೀಡಲಾಯಿತು, ಅದೇ ವಿಶ್ವಾಸವನ್ನು ಕಾಳಾಮುಖ ಗುರುಗಳಿಗೂ ತೋರಿಸಲಾಯಿತು. ವಿಷ್ಣುವರ್ಧನನು ಜೈನ ಧರ್ಮದಿಂದ ಹೊರಬಂದಿದ್ದರೂ, ಜೈನರಿಗೆ ಕಿರುಕುಳ ನೀಡಿದನೆಂಬ ಅಸ್ಪಷ್ಟ ಊಹೆಗಳ ಹಿನ್ನೆಲೆಯಲ್ಲಿ, ಅದನ್ನು ಅಲ್ಲಗಳೆಯಲು, ಆತನು ಜೈನ ಬಸದಿಗಳಿಗೆ ಅನುದಾನಗಳನ್ನು ನೀಡಿದನೆಂದು ಸಾಬೀತುಪಡಿಸುವ ಸಾಧಾರ ದಾಖಲೆಗಳು ಇವೆ. ಅಷ್ಟೇ ಅಲ್ಲ, ರಾಜ್ಯವೊಂದರ ರಾಜನು ವೈಯುಕ್ತಿಕವಾಗಿ ನಿರ್ದಿಷ್ಟ ಮತವೊಂದರ ಹಿಂಬಾಲಕನಾದರೂ, ತನ್ನ ಪ್ರಜೆಗಳು ಯಾವುದೇ ಧರ್ಮದ ಅನುಯಾಯಿಗಳಾಗಲಿ, ಅವರನ್ನು ರಕ್ಷಿಸುವ ಆದ್ಯ ಕರ್ತವ್ಯದಿಂದ ಹಿಮ್ಮುಖನಾಗುತ್ತಿರಲಿಲ್ಲ. ವಿಜಯನಗರದ ಅರಸರು ವಿವಿಧ ಧಾರ್ಮಿಕ ಮತಗಳ ನಡುವೆ ಚರ್ಚೆಗಳನ್ನು ನಡೆಸಿದರು. ಅದೇ ಶತಮಾನದ ಅಂತ್ಯದ ವೇಳೆಗೆ ಉತ್ತರದಲ್ಲಿ ಅಕ್ಬರನು ಹೆಚ್ಚು ಸಮಗ್ರ ರೀತಿಯಲ್ಲಿ ಇದನ್ನು ಮಾಡಿದನು. ಕಡುಶ್ರದ್ಧೆಯ ಮುಸಲ್ಮಾನ ದೊರೆಯಾದ ಟಿಪ್ಪು ತಾನೊಬ್ಬ ಸಾರ್ವಭೌಮನಾಗಿ ಹಿಂದೂ ದೇವಾಲಯ ಹಾಗೂ ಮಠಗಳನ್ನು ರಕ್ಷಿಸಲು ಬದ್ಧನೆಂದು ಭಾವಿಸಿದನು. ಧರ್ಮವು ಸಮುದಾಯಗಳಲ್ಲಿ ಜೀವಂತ ಶಕ್ತಿಯಾಗಿದ್ದು, ಸಾಮುದಾಯಕ ಸ್ಮೃತಿಯು, ಸಮನ್ವಯತೆ ಹಾಗೂ ಸಾಮರಸ್ಯಕ್ಕಾಗಿ ಹಾತೊರೆಯುವ ಭಾವವನ್ನು ಸದಾ ವ್ಯಕ್ತಪಡಿಸಿದೆ. ಅತ್ಯಂತ ವೈವಿಧ್ಯಮಯ ಧಾರ್ಮಿಕ ಸಂಸ್ಕೃತಿಗಳನ್ನು ಪೋಷಿಸಿದ ಭೂಮಿಯಾಗಿ ಕರ್ನಾಟಕವು ಹೊರಹೊಮ್ಮಿದೆ.



ಕೂಡಲ ಸಂಗಮದ ಸಂಗಮೇಶ್ವರ ದೇವಸ್ಥಾನ



ಸಹಸ್ರಫಣಿ ತೀರ್ಥಂಕರ, ವಿಜಾಪುರ ಜಿಲ್ಲೆ



*ಚಾಮುಂಡೇಶ್ವರಿ ದೇವಸ್ಥಾನದ ದ್ವಾರಗೋಪುರ,*
*ಚಾಮುಂಡೇಶ್ವರಿ ಬೆಟ್ಟ, ಮೈಸೂರು*